# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ






ಸಂಪುಟ : 37 ಸಂಚಿಕೆ : 17 ದುರ್ಮುಖಿ–ವೃಷಭ ಕಲಿಯುಗಾಬ್ದ 5117 15–4–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಕರ್ನಾಟಕದ ಭೀಕರ ಬರ ಪರಿಸ್ಥಿತಿ ಎದುರಿಸಲು ನೆರವಾಗೋಣ ಬನ್ನಿ

ಉತ್ತರ ಕರ್ನಾಟಕ ನಮ್ಮ ರಾಜ್ಯದ ಬಹುದೊಡ್ಡ ಆಹಾರ ಬೆಳೆಗಳ ಕಣಜ. ಸಾಸಿವೆ, ಉದ್ದಿನ ಕಾಳು, ಉದ್ದಿನ ಬೇಳೆ, ಕಡಲೇ ಕಾಳು, ಕಡಲೇ ಬೇಳೆ, ತೊಗರಿ ಕಾಳು, ತೊಗರಿ ಬೇಳೆ, ಒಣ ಮೆಣಸು, ಶೇಂಗಾ, ಸೂರ್ಯಕಾಂತಿ, ಕುಸುಬೆ, ಎಳ್ಳು, ಹುಚ್ಚೆಳ್ಳು, ಬಿಳಿಜೋಳ, ಗೋಧಿ, ಜವೆಗೋಧಿ, ದನಿಯಾ, ಗೋವಿನಜೋಳ, ಕಬ್ಬು–ಬೆಲ್ಲ, ನವಣೆ, ಸಜ್ಜೆ, ಆರಕ... ಹೀಗೆ ದೀರ್ಘಕಾಲ ನಮ್ಮ ಅಡುಗೆ ಮನೆಗಳಲ್ಲಿ ಉಳಿಯಬಲ್ಲ ಹಲವು ಬೆಳೆಗಳು ಉತ್ತರ ಕರ್ನಾಟಕದ ಮಣ್ಣಿನ ಕೊಡುಗೆ. ಇಲ್ಲಿಯ ಬೆಳೆಗಳಿಂದಲೇ ರೂಪಾಂತರಗೊಂಡು ಹೊರಬರುವ ಉಪ್ಪಿಟ್ಟಿನ ರವೆ, ಶ್ಯಾವಿಗೆಗಳು ಗೋಧಿಯ ಉಪ ಉತ್ಪನ್ನಗಳು. ಪುಟಾಣಿ, ಕಡಲೆಹಿಟ್ಟು ಕಡೆಲೆಕಾಳಿನ ಮತ್ತೊಂದು ಮುಖ. ನಮ್ಮ ಯಾವುದೇ ಅಡುಗೆ ಇರಲಿ ಸಾಸಿವೆಯ ಒಗ್ಗರಣೆ ಇಲ್ಲದೆ ಆದೀತೆ? ನಮ್ಮ ಅನ್ನದ ಬಟ್ಟಲಿನ ಬಹುಪಾಲು ಉತ್ತರ ಕರ್ನಾಟಕದ್ದೇ. ಕೈಯಲ್ಲೊಂದು ದಿಕ್ಸೂಚಿ ಹಿಡಿದು ನಮ್ಮ ಅನ್ನದ ಬಟ್ಟಲಿನಲ್ಲಿರುವ ಪದಾರ್ಥಗಳು ಎಲ್ಲಿಂದ ಬರುತ್ತಿದೆ ಎಂದು ಕೇಳಿದರೆ ದಿಕ್ಸೂಚಿ ಉತ್ತರ ಕರ್ನಾಟಕದೆಡೆ ಮುಖ ಮಾಡಿ ನಿಂತು ಬಿಡುತ್ತದೆ. 'ಆಹಾರಗಳ ಅಭಾವ ಉಂಟಾದ್ರೆ' ಎಂದು ಆಗೊಮ್ಮೆ ಈಗೊಮ್ಮೆ ನಮದಲ್ಲೇಳುವ ಪ್ರಶ್ನೆಗಳಿಗೆ 'ಉತ್ತರ ಕರ್ನಾಟಕ ಇದೆಯಲ್ಲ' ಎನ್ನುವುದೇ ಉತ್ತರ.

ಉತ್ತರವಾಗಿಯೇ ಬದುಕಿದ್ದ ಉತ್ತರ ಕರ್ನಾಟಕದಲ್ಲಿ ಈಗ 'ಊರಿನಲ್ಲಿ ಉಳಿವುದೊ–ಊರು ಬಿಡುವುದೊ', 'ಜಾನುವಾರುಗಳನ್ನು ಉಳಿಸಿಕೊಳ್ಳುವುದೊ–ಮಾರಿಬಿಡುವುದೊ' ಎನ್ನುವ ಗಂಭೀರ ಪ್ರಶ್ನೆ ರೈತರಲ್ಲೆದ್ದಿದೆ. ಕೆರೆ–ಬಾವಿ–ಕಟ್ಟೆಗಳು ಒಣಗಿವೆ. ಅಂತರ್ಜಲದಲ್ಲಿ ನೈಟ್ರೇಟ್–ಫ್ಲೋರೈಡ್ ಅಂಶಗಳು... ಕುಡಿಯಲು ನೀರಿಲ್ಲ... ಲಭ್ಯವಿರುವ ನೀರೂ ಆರೋಗ್ಯಕರವಾಗಿಲ್ಲ. ಮನೆಯಲ್ಲಿದ್ದ ಕಾಳುಗಳೆಲ್ಲ ಬಿತ್ತನೆಯಲ್ಲಿ ಭೂಮಿ ಸೇರಿ ಸಮಾಧಿಯಾಗಿವೆ. ಮಳೆಯಿಲ್ಲದೆ ಆಹಾರ–ಮೇವು–ನೀರಿನ ತೀವ್ರ ಅಭಾವ. 'ಈಗಿರುವ ನೀರು ನಾಳೆಗೆ ಸಾಕು–ನಾಳದ್ದಿಗೆ ಎಲ್ಲಿ ಹೋಗುವುದು' ಊರಿನ ಅಗಸೆ ಬಾಗಿಲಲ್ಲಿ ಕೂತಿರುವ ಹಿರಿಯರಲ್ಲಿ ಕಾಡುತ್ತಿರುವ ಆಂತಕಗಳು.

ಹಲವು ವರ್ಷಗಳು ತಮ್ಮ ಎದೆಯಂತಲೇ ಭಾವಿಸಿ ಸಾಕಿದ್ದ ಲಕ್ಷಗಟ್ಟೆಲೆ ಬೆಲೆಯ ಎತ್ತುಗಳನ್ನು ಕಣ್ಣೆದುರೆ ನರಳುವುದನ್ನು ನೋಡಲಾಗದೆ ರೈತರು ಮಾರುತ್ತಿದ್ದಾರೆ. ಈಗಾಗಲೇ ಶೇ. 40ರಷ್ಟು ಎತ್ತುಗಳು ಮಾರಾಟವಾಗಿ ಹೋಗಿವೆ... ಕೊಟ್ಟ ಹಣಕ್ಕೆ–ಕೇಳಿದ ಬೆಲೆಗೆ! ಎತ್ತುಗಳೇ ಇಲ್ಲದೆ ಮುಂದಿನ ಕೃಷಿ ಹಾಗಾಮಿನ ಬೇಸಾಯದ ಪರಿಸ್ಥಿತಿ ಊಹಿಸಲು ಅಸಾಧ್ಯ ಎಂಬ ಭಯ ಕಾಡುತ್ತಿದೆ. ಕಣ್ಣು ಕಾಣುವಷ್ಟೂ ದೂರ ತಮ್ಮ ಜಾನುವಾರುಗಳನ್ನೇ ನೋಡುತ್ತಾ, 'ಕ್ಷಮಿಸು ತಾಯಿ' ಎಂದು ಮನದಲ್ಲಿ ಬೇಡುತ್ತಾ ಮನೆಯ ಕಡೆಗೆ ಹಿಂದ್ಹೆಜ್ಜೆ ಹಾಕುತ್ತಿರುವ ರೈತರನ್ನು ನೋಡುವಾಗ 'ದೇವರೇ ನೀ ಎಲ್ಲಿದ್ದಿ' ಎಂದು ಜೋರಾಗಿ ಕೂಗಿ ಕೇಳಬೇಕೆನಿಸುತ್ತದೆ. ಆಪ್ತ ಜೀವಗಳನ್ನು ಸಾಕಾಲಾಗದೆ ಮಾರುವಾಗ ರೈತರಿಗೆ ಆಗುವ ನೋವು–ಸಂಕಟ ಸಮಾಜದ ಅನುಭವಕ್ಕೆ ತರಿಸಲಾದೀತೆ?

ಕೃಷಿಯನ್ನೇ ಆಧಾರವಾಗಿಟ್ಟುಕೊಂಡಿದ್ದ ಸಾವಿರಾರು ರೈತ ಕುಟುಂಬಗಳು ಬದುಕಿನಾಶ್ರಯಕ್ಕಾಗಿ ಊರೇ ಬಿಡುತ್ತಿವೆ–ವಲಸೆ ಹೊರಟಿವೆ.

ನೀರಿನ ತೀವ್ರ ಅಭಾವಕ್ಕೊಳಗಾಗಿರುವ ಕಲಬುರ್ಗಿ ತಾಲ್ಲೂಕಿನ ಸಂತೆಯೊಂದರಲ್ಲಿ ಆಕಳು, ಎತ್ತುಗಳನ್ನು ಮಾರಲು ಮನೆ–ಮಂದಿಯೆಲ್ಲ ಬಂದಿದ್ರು. ಎಲ್ಲರ ಕೈ ಆ ಆಕಳು– ಎತ್ತುಗಳ ಮೈ ಸವರುತಿತ್ತು. ಮನೆಯ ಪುಟ್ಟ ಮಗು ಆಕಳ ಕೊರಳ ಹಗ್ಗ ಹಿಡಿದಿತ್ತು. ಮನೆಯ ಹಿರಿಯ ಆ ಹಗ್ಗ ಕಸಿದು ಕೊಳ್ಳುವವನಿಗೆ ಕೊಟ್ಟಾಗ ತಾಯಂದಿರು ಸೆರಗು ಮುಚ್ಚಿಕೊಂಡು ಕಣ್ಣೀರಿಡುವ ದೃಶ್ಯ ನೋಡುವಾಗ ಕಣ್ಣಾಲೆಗಳು ತೇವಗೊಳ್ಳದಿರದು. ಮರಳಿ ಮನೆಯೆಡಗೆ ಸಾಗುವಾಗ ನನ್ನೆದೆಯ ಗೆಜ್ಜೆಯನ್ನು ಮಾರಿಬಿಟ್ಟೆಯಾ... ನನ್ನ ಕಂದ ಎಲ್ಲಿ ಎಂದು ನನ್ನ ನೆಲ ಕೇಳಿದ್ರೆ ಏನ್ಹೇಳಿ ಸ್ವಾಮಿ... ಕೊಟ್ಟ ಹಣ ತೋರಿಸಿದ್ರೆ ಆ ತಾಯಿಗೆ ಸಮಾಧಾನ ಆಗುತ್ತಾ?

ರೈತರ ಭಾವಜಗತ್ತಿನ ಈ ಪ್ರಶ್ನೆಗಳಿಗೆ ಉತ್ತರಿಸುವವರಾರು?



## ರಾಷ್ಟ್ರೀಯ ಸ್ವಯಂಸೇವಕ ಸಂಘ, ಕರ್ನಾಟಕ

**ಸಮಾಜ ಬಾಂಧವರಲ್ಲಿ ಒಂದು ಮನವಿ,**

ಬೀಕರ ಬರಗಾಲದಿಂದಾಗಿ ನಾಗರಿಕರ ಬದುಕು ದುಸ್ತರವಾಗಿದೆ. ಅಲ್ಲಿನ ಸಂತ್ರಸ್ತರಿಗೆ ಇದೀಗ ಮಾನವೀಯ ನೆರವು ಅವಶ್ಯವಿದ್ದು, ಆರ್ಥಿಕ ಧನಸಹಾಯವನ್ನು ದೇಣಿಗೆ ರೂಪದಲ್ಲಿ ನೀಡಿ ಸಹಕರಿಸಬೇಕು ಹಾಗೂ ಅಲ್ಲಿನ ಜನತೆಗೆದುರಾಗಿರುವ ಈ ಸಂಕಷ್ಟವನ್ನು ನಿವಾರಿಸಲು ನಮ್ಮೊಂದಿಗೆ ಕೈ ಜೋಡಿಸಬೇಕೆಂದು ಕಳಕಳಿಯ ವಿಜ್ಞಾಪನೆಗಳು.

ದೇಣಿಗೆ ನೀಡುವವರು ಈ ಖಾತೆಗಳಿಗೆ ಕಳುಹಿಸಬಹುದು
**ಆರ್.ಎಸ್.ಎಸ್ ಸಂಚಾಲಿತ ಸಂತ್ರಸ್ತ ಪರಿಹಾರ ನಿಧಿ**

| **ಹುಬ್ಬಳ್ಳಿ** | **ಬೆಂಗಳೂರು** |
|---|---|
| ಕೆನರಾ ಬ್ಯಾಂಕ್ | ಕೆನರಾ ಬ್ಯಾಂಕ್ |
| ಖಾತೆ ಸಂಖ್ಯೆ: 0514101042880 | ಖಾತೆ ಸಂಖ್ಯೆ: 0789101009327 |
| (IFSC: CNRB 0000514) | (IFSC: CNRB 0000789) |
| ಸ್ಟೇಷನ್ ರೋಡ್, ಹುಬ್ಬಳ್ಳಿ | ಕೆಂಪೇಗೌಡನಗರ ಶಾಖೆ, ಬೆಂಗಳೂರು |

(80G ಆದಾಯ ತೆರಿಗೆ ವಿನಾಯಿತಿ ಸೌಲಭ್ಯ ಇದೆ.)

**ಸಂಪರ್ಕ:**

| | |
|---|---|
| ಶ್ರೀ ಶಿವಲಿಂಗ ಕುಂಬಾರ | 94484 45907 (ಕಲಬುರ್ಗಿ) |
| ಶ್ರೀ ರಾಜಶೇಖರ | 78290 65272 (ಬಳ್ಳಾರಿ) |
| ಶ್ರೀ ಗಂಗಾಧರ ಕಾಸರಘಟ್ಟ | 98452 15474 (ತುಮಕೂರು) |
| ಶ್ರೀ ಆನಂದ | 94482 04831 (ಶಿವಮೊಗ್ಗ) |

- ಕರ್ನಾಟಕದಲ್ಲಿಂದು ಬರಗಾಲದ, ಭಯದ ಕಾರ್ಮೋಡಗಳು. ಜನವರಿಯಲ್ಲೇ ಬತ್ತಿದ ಕೃಷ್ಣೆ. ಉತ್ತರ ಕರ್ನಾಟಕದ ಎಲ್ಲ ನದಿಗಳು, ಕೆರೆಗಳು, ಎಲ್ಲ ಜಲಾಶಯಗಳಲ್ಲೂ ನೀರು ಬರಿದಾಗುತ್ತಿದೆ.
- ಒಕ್ಕಲುತನ ಬಿಟ್ಟು ವಲಸೆ ಹೋಗುತ್ತಿರುವ ರೈತರು. ಬೋರ್‌ಗಳಲ್ಲಿ ನೀರಿಲ್ಲ. ಒಂದು ಕ್ಯಾನ್‌ಗೆ ರೂ. 50/– ರಂತೆ ಕುಡಿಯುವ ನೀರಿನ ಮಾರಾಟದ ದಂಧೆ.
- ಮಲೆನಾಡಿನ ಸೆರಗಿನಲ್ಲಿ ನಿತ್ಯ ಹಸಿರಿನಿಂದ ಕಂಗೊಳಿಸುತ್ತಿದ್ದ ಖಾನಾಪುರದ ಅನೇಕ ಗ್ರಾಮಗಳು ಕಳೆದ 40 ವರ್ಷಗಳಲ್ಲಿ ಮೊದಲಬಾರಿಗೆ ಬರಗಾಲವನ್ನು ಎದುರಿಸುತ್ತಿವೆ.
- ಕರಾವಳಿಯ ಎಲ್ಲ ತಾಲೂಕು ಕೇಂದ್ರಗಳಲ್ಲೂ ಕುಡಿಯುವ ನೀರಿನ ಸಮಸ್ಯೆ.
- ದಕ್ಷಿಣ ಕರ್ನಾಟಕದ 5 ಜಿಲ್ಲೆಗಳಲ್ಲಿ ಇದೇ ಪರಿಸ್ಥಿತಿ. ಹಲವೆಡೆ 2–3 ವರ್ಷಗಳಿಂದ ಬೆಳೆಯಾಗಿಲ್ಲ; ಈಗ ಜಲಕ್ಷಾಮದ ಸಂಕಟ. ಕುಡಿಯುವ ನೀರು ಕಲುಷಿತವಾಗಿದೆ. ಮಂಡಿ, ಮೂಳೆಗಳ ಖಾಯಿಲೆ ಕಾಡುತ್ತಿದೆ.
- ಬಳ್ಳಾರಿಯ 311ಕ್ಕೂ ಹೆಚ್ಚು ಗ್ರಾಮಗಳಲ್ಲಿ ಭೀಕರ ಜಲಕ್ಷಾಮ. ಸರಕಾರದ ವರದಿಯಂತೆ 744 ಗ್ರಾಮಗಳಲ್ಲಿ ಸಮಸ್ಯೆ ಉಲ್ಬಣ. ಬಳ್ಳಾರಿಯಲ್ಲಿ ಟ್ಯಾಂಕರ್ ನೀರಿಗೆ ರೂ 750/–
- ಜೇವರ್ಗಿ, ಕುಷ್ಟಗಿ, ಯಲಬುರ್ಗಾ ಮುಂತಾದೆಡೆ ಕುಡಿಯುವ ನೀರಿನಲ್ಲಿ ಆರೋಗ್ಯಕ್ಕೆ ಹಾನಿಕರವಾದ ಫ್ಲೋರೈಡ್ ಮತ್ತು ನೈಟ್ರೇಟ್ ಅಂಶಗಳು. ಥೈರಾಯಿಡ್, ಕಿಡ್ನಿ ಸಮಸ್ಯೆ, ಮೊಣಕಾಲು ನೋವು.
- ಪ್ರಾಣಕ್ಕಿಂತ ಪ್ರಿಯವಾದ ಎತ್ತುಗಳನ್ನು ಸಾಕಲಾರದೆ, ಕೇಳಿದ ಬೆಲೆಗೆ, ಸಿಕ್ಕಿದ ಹಣಕ್ಕೆ ಮಾರುತ್ತಿರುವ ರೈತರು. ಬಬಲಾದಿ ಜಾತ್ರೆಯಲ್ಲಿ ಒಂದೂಕಾಲು ಲಕ್ಷ ರೂ. ಬೆಲೆಬಾಳುವ ಎತ್ತು 10 ಸಾವಿರಕ್ಕೆ ಕಟುಕರ ಕೈಗಳಿಗೆ!.

## ನಾವೇನು ಮಾಡಬಹುದು...

- ನೀರನ್ನು ಮಿತವಾಗಿ ಬಳಸುವ ಸಂಕಲ್ಪ ಮಾಡುವುದು.
- ನಮ್ಮ ಮನೆಯಲ್ಲಿ, ಉದ್ಯೋಗ ಸ್ಥಳದಲ್ಲಿ ಹಾಗೂ ಇನ್ನಿತರೆಡೆಗಳಲ್ಲಿ ಅನಗತ್ಯ ನೀರಿನ ಬಳಕೆ ಮಾಡದಂತೆ ಜಾಗೃತಿ ಮೂಡಿಸುವುದು.
- ಬರ ನಿರ್ವಹಣೆಯಲ್ಲಿ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸುವುದು
- ಮೇವು–ನೀರಿನ ವ್ಯವಸ್ಥೆ ಕಲ್ಪಿಸಬಹುದಾದ ಖಾಸಗಿ ಸಂಸ್ಥೆಗಳು, ಶಿಕ್ಷಣ ಕೇಂದ್ರಗಳು, ಧಾರ್ಮಿಕ ಸಂಸ್ಥೆಗಳ ಮಾಹಿತಿ, ವಿಳಾಸಗಳನ್ನು ಸಂಗ್ರಹಿಸುವುದು.
- ಜಾನುವಾರುಗಳಿಗೆ ಮೇವು–ನೀರಿನ ತೀವ್ರ ಕೊರತೆ ಇರುವ ಸ್ಥಾನಗಳ ಮಾಹಿತಿ ನೀಡುವುದು.
- ಜಾನುವಾರುಗಳಿಗೆ ಮೇವು–ನೀರಿನ ವ್ಯವಸ್ಥೆ ಕಲ್ಪಿಸಬಲ್ಲವರು, ವಲಸೆ ಹೋಗುತ್ತಿರುವ ಗ್ರಾಮೀಣರಿಗೆ ಸಹಕಾರ ನೀಡಬಯಸುವವರು, ಇನ್ನಾವುದೇ ರೀತಿಯಲ್ಲಿ ಬರದ ಸಮಸ್ಯೆಗೆ ಪರಿಹಾರ ಒದಗಿಸಬಲ್ಲವರು, ತಾತ್ಕಾಲಿಕ ಮತ್ತು ಶಾಶ್ವತ ಪರಿಹಾರದ ಯೋಜನೆಯನ್ನು ಸೂಚಿಸಬಯಸುವ ತಜ್ಞರು – ಮುಂತಾದವರ ಹೆಸರು ವಿಳಾಸ ತಿಳಿಸುವುದು.

# ನಮ್ಮೂರ ಕೆರೆಗೆ ನಾವೇ ಒಡೆಯರು

ಇವರು ಸರ್ಕಾರದ ಹಣಕ್ಕಾಗಿ ಕಾಯದೇ ತಮ್ಮೂರಿನ ಕೆರೆ ಅಭಿವೃದ್ಧಿಗೆ ಖುದ್ದು ಹಣ ಸಂಗ್ರಹಿಸಿಕೊಂಡು ಕಾಮಗಾರಿಗಳನ್ನು ಮಾಡಿಕೊಳ್ಳುತ್ತಾರೆ. ಮನವೊಲಿಕೆ ತಂತ್ರಗಳ ಮೂಲಕ ಕೆರೆಗಳ ಒತ್ತುವರಿಯನ್ನು ಬಿಡಿಸುತ್ತಾರೆ. ಮತ್ತೆ ಒತ್ತುವರಿಯಾಗದಂತೆ ಗಡಿಕಂದಕಗಳನ್ನು ನಿರ್ಮಿಸಿ ಜತನದಿಂದ ಕೆರೆಗಳನ್ನು ನೋಡಿಕೊಳ್ಳುತ್ತಿದ್ದಾರೆ. ಕೆರೆ ಅಚ್ಚುಕಟ್ಟಿನ ಕೊನೆಯ ರೈತನಿಗೂ ಕೃಷಿಗಾಗಿ ನೀರು ಸಿಗುವಂತೆ ಮಾಡಿಕೊಂಡಿದ್ದಾರೆ. ಇಂಥ ಒಂದು ಚಿತ್ರಣ ಕಾಣಸಿಗುವುದು ಶಿವಮೊಗ್ಗ, ಕೋಲಾರ, ಹಾನಗಲ್ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ. ಜಲ ಸಂವರ್ಧನೆ ಯೋಜನೆ ಮೂಲಕ ರಚನೆಗೊಂಡ ಕೆರೆ ಅಭಿವೃದ್ಧಿ ಸಂಘಗಳು ತೆರೆಮರೆಯಲ್ಲಿ ತಮ್ಮೂರಿನ ಕೆರೆಗಳ ರಕ್ಷಣೆಯ ಕೆಲಸ ಮಾಡುತ್ತಿವೆ. ಕಡಿಮೆ ನೀರಿನಲ್ಲಿ ಬೆಳೆ ತೆಗೆಯುವುದನ್ನು ವಿವಿಧ ಕೃಷಿ ತಾಂತ್ರಿಕತೆಗಳನ್ನು ರೈತ ಪಾಠಶಾಲೆಗಳ ಮೂಲಕ ಗ್ರಾಮಸ್ಥರು ಕಲಿತಿದ್ದಾರೆ.



ಕೆರೆಯಲ್ಲಿ ಮೀನುಗಾರಿಕೆ ಮಾಡಿಕೊಳ್ಳುವ ಮೂಲಕ ಗ್ರಾಮದ ದುರ್ಬಲ ವರ್ಗದ ಕುಟುಂಬಗಳಿಗೆ ಆಸರೆಯಾಗಿದ್ದಾರೆ. ಬಿದ್ದ ಮಳೆ ಹನಿಯನ್ನು ಸಂಗ್ರಹಿಸಿ ಜಲ ಮರುಪೂರಣದ ಮೂಲಕ ಯಶಸ್ಸು ಸಾಧಿಸುತ್ತಿದ್ದಾರೆ. ಕೆರೆಯ ನಿರಂತರ ನಿರ್ವಹಣೆ ಮತ್ತು ಉಸ್ತುವಾರಿಯನ್ನು ಗ್ರಾಮಸ್ಥರೇ ವಹಿಸಿಕೊಂಡಿದ್ದಾರೆ. ಸದಾ ಎಲ್ಲವನ್ನೂ ಸರ್ಕಾರವೇ ಮಾಡಬೇಕಾಗಿಲ್ಲ ಎಂಬುದನ್ನು ಅರಿತು ನೀರಿನ ಬಗ್ಗೆ ತಮ್ಮ ಕರ್ತವ್ಯವನ್ನು ಮರೆಯದೇ ಜಲಕ್ಷಾಮದ ನಡುವೆಯೂ ನೀರ ನೆಮ್ಮದಿ ಕಂಡುಕೊಂಡಿವೆ ಈ ಕೆರೆ ಅಭಿವೃದ್ಧಿ ಸಂಘಗಳು.


ಗ್ರಾಮೀಣ ಬದುಕು, ಪರಿಸರವನ್ನು ಪುನರುತ್ಥಾನ ಮಾಡಬೇಕಾದಲ್ಲಿ ಗ್ರಾಮದ ಕೇಂದ್ರ ಬಿಂದುವಾದ ಕೆರೆಗಳನ್ನು ಅದರ ಮೂಲ ವ್ಯವಸ್ಥೆಗೆ ತರಬೇಕು. ಇದಕ್ಕಾಗಿ ಗ್ರಾಮಗಳಲ್ಲಿ ಜನರನ್ನು ಒಗ್ಗೂಡಿಸಬೇಕು. ಸಮುದಾಯದ ಮೂಲಕವಷ್ಟೇ ಕೆರೆಗಳನ್ನು ಅಭಿವೃದ್ಧಿಪಡಿಸಿದಾಗ ಕೆರೆಗಳ ಅಭಿವೃದ್ಧಿ ಸಾಧ್ಯ ಎಂಬ ಪರಿಕಲ್ಪನೆಯೊಂದಿಗೆ ವಿಶ್ವಬ್ಯಾಂಕಿನ ಆರ್ಥಿಕ ನೆರವಿನೊಂದಿಗೆ 2001–2002ರಲ್ಲಿ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆ (ಜಲಸಂವರ್ಧನೆ ಯೋಜನಾ ಸಂಘ) ರಾಜ್ಯದಲ್ಲಿ ಜಾರಿಗೆ ಬಂತು. ಆದರೆ ಕೆಲವು ಕೆರೆ ಅಭಿವೃದ್ಧಿ ಸಂಘಗಳು ತಮ್ಮೂರಿನ ಕೆರೆ ಕೆಲಸಗಳನ್ನು ಮಾಡಿಕೊಳ್ಳಲು ಸರ್ಕಾರಿ ಹಣಕ್ಕಾಗಿ ಕಾಯುವುದಿಲ್ಲ. ಬದಲಾಗಿ ಕೆರೆಯಲ್ಲಿ ಮೀನುಗಾರಿಕೆ, ಅಚ್ಚುಕಟ್ಟು ಪ್ರದೇಶದ ರೈತರಲ್ಲಿ ಸಂಗ್ರಹಿಸುವ ನೀರಿನ ಕರ, ಸಂಘದ ವತಿಯಿಂದ ಮಹಿಳೆಯರಿಗೆ ನೀಡಿರುವ ಸಾಲಸೌಲಭ್ಯದ ಬಡ್ಡಿ ಹಣ, ಕೆರೆ ಕಾಮಗಾರಿ ಮಾಡಿಕೊಳ್ಳುವಾಗ ಉಳಿದ ಹಣ, ಕೆರೆ ಏರಿಯಲ್ಲಿ ಬೆಳೆಯುವ ಹುಲ್ಲಿನ ಮಾರಾಟ ಇನ್ನಿತರೆ ಆದಾಯ ಮೂಲದ ಹಣದಿಂದ ಕೆರೆ ಕೆಲಸ ಮಾಡಿಕೊಳ್ಳುತ್ತಿದ್ದಾರೆ. ಕಾಲಕಾಲಕ್ಕೆ ಗ್ರಾಮಸ್ಥರು ಶ್ರಮದಾನ ಮಾಡುವ ಮೂಲಕ ತಮ್ಮೂರಿನ ಕೆರೆಗಳನ್ನು ಸಂರಕ್ಷಿಸಿಕೊಳ್ಳುತ್ತಿದ್ದಾರೆ.

ಇದಕ್ಕೆ ಉದಾಹರಣೆ, ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಹಿರೇಕಣಗಿ ಗ್ರಾಮದ ಶ್ರೀ ಮಾರಿಕಾಂಬ ಕೆರೆ ಅಭಿವೃದ್ಧಿ ಸಂಘ, ಕೋಲಾರದ ಅರಬ್ಬಿಕೊತ್ತನೂರಿನ ಸೋಮೇಶ್ವರ ಕೆರೆ ಅಭಿವೃದ್ಧಿ ಸಂಘ, ಕೊಪ್ಪಳದ ಗೌರಿಪುರ ಗ್ರಾಮದ ದುರ್ಗಾದೇವಿ ಕೆರೆ ಅಭಿವೃದ್ಧಿ ಸಂಘ, ಚಿತ್ರದುರ್ಗದ ಕಾಟೇನಹಳ್ಳಿ ಗ್ರಾಮದ ಮಾರುತಿ ಕೆರೆ ಅಭಿವೃದ್ಧಿ ಸಂಘ ಮುಂತಾದವು. ಚಿತ್ರದುರ್ಗದ ಮಲ್ಲಾಪುರ ಗ್ರಾಮದ ಮಹಾತ್ಮಗಾಂಧಿ ಕೆರೆ ಅಭಿವೃದ್ಧಿ ಸಂಘವು ಕೆರೆಯ ಬಗೆಗಿನ ಕಾಳಜಿ ಜೊತೆಗೆ ಗ್ರಾಮದ ಬಡವರಿಗೆ, ನಿರ್ಗತಿಕರಿಗೆ, ಅಸಹಾಯಕ ವೃದ್ಧರಿಗೆ ಔಷಧಿ, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಕೊಡುತ್ತಿದೆ. ಕೆರೆ ಅಭಿವೃದ್ಧಿ ಸಂಘಗಳ ರಚನೆಯಿಂದ ಗ್ರಾಮಗಳಲ್ಲಾಗಿರುವ ಈ ಬದಲಾವಣೆಯಿಂದಾಗಿ ಮುಂದಿನ ಪೀಳಿಗೆಗೆ ಕೆರೆಗಳು ಉಳಿದುಕೊಳ್ಳಲು ಸಾಧ್ಯವಾಗುತ್ತಿದೆ ಎಂಬುದು ತಜ್ಞರ ಅಭಿಪ್ರಾಯ.

**ಕೃಪೆ: ಪ್ರಜಾವಾಣಿ**

## ದೇಶದಾದ್ಯಂತ ಏಕಕಾಲದಲ್ಲಿ ಚುನಾವಣೆ

ಗ್ರಾಮ ಪಂಚಾಯಿತಿಯಿಂದ ಹಿಡಿದು ಲೋಕಸಭೆ ತನಕ ದೇಶದ ಎಲ್ಲ ಹಂತದ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸುವ ಪ್ರಸ್ತಾವನೆಯನ್ನು ಪ್ರಧಾನಿ ನರೇಂದ್ರ ಮೋದಿ ಮುಂದಿಟ್ಟಿದ್ದಾರೆ. ಸರ್ವಪಕ್ಷ ಸಭೆಯಲ್ಲಿಯೂ ಈ ವಿಚಾರ ಚರ್ಚೆಯಾಗಿದ್ದು ಬಹುತೇಕ ಎಲ್ಲ ಪಕ್ಷಗಳು ಇದಕ್ಕೆ ಒಲವು ವ್ಯಕ್ತಪಡಿಸಿವೆ. ಪ್ರಸ್ತುತ ಇದು ಚರ್ಚೆಯ ವಿಷಯವಾಗಿದ್ದು, ಮುಂದಿನ ದಿನಗಳಲ್ಲಿ ಯಾವ ತಿರುವು ಪಡೆಯುತ್ತದೆ ಎಂಬುದನ್ನು ಕಾದು ನೋಡಬೇಕಿದೆ. ಏಕಕಾಲದಲ್ಲಿ ಚುನಾವಣೆ ನಡೆಯುವುದರಿಂದ ಕಾರ್ಯಕರ್ತರ ಶ್ರಮ ಹಾಗೂ ಅನಗತ್ಯ ವೆಚ್ಚ ಹಾಗೂ ಚುನಾವಣಾ ನೀತಿ ಸಂಹಿತೆ ಹೆಸರಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಪದೇಪದೆ ಹಿನ್ನಡೆಯಾಗುವುದನ್ನು ತಡೆಯಬಹುದು ಎಂಬುದು ಈ ಚಿಂತನೆಯ ಹಿಂದಿರುವ ಉದ್ದೇಶ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಆರಂಭದಲ್ಲಿ ಲೋಕಸಭೆ ಹಾಗೂ ರಾಜ್ಯಗಳ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಯುತ್ತಿತ್ತು. ಆದರೆ, 1959ರಲ್ಲಿ ಅಂದಿನ ಪ್ರಧಾನಿ ಜವಾಹರಲಾಲ್ ನೆಹರು ಸಂವಿಧಾನದ 356ನೇ ವಿಧಿ ಬಳಸಿ ಕೇರಳದ ಕಾಂಗ್ರೆಸ್ಸೇತರ ಸರ್ಕಾರವನ್ನು ವಿಸರ್ಜನೆ ಮಾಡಿದ್ದರಿಂದ ಹಾಗೂ 1971ರಲ್ಲಿ ಇಂದಿರಾ ಗಾಂಧಿ ಅವಧಿಗೂ ಮುನ್ನ ಲೋಕಸಭೆ ಚುನಾವಣೆ ನಡೆಸಲು ಮುಂದಾಗಿದ್ದು ಕೂಡ ಲೋಕಸಭೆ ಹಾಗೂ ರಾಜ್ಯಗಳ ವಿಧಾನಸಭಾ ಚುನಾವಣಾ ವೇಳಾಪಟ್ಟಿಗಳು ವ್ಯತ್ಯಾಸವಾಗಲು ಆರಂಭಿಕ ಕಾರಣವಾಗಿತ್ತು.




# ಬೇಸಾಯದ ಬದುಕೇ ಚೆಂದ ಎಂದ ಇಂದಿರಮ್ಮ

ನೆಲದ ಮಾತು

'ಈಗ ಅಣಬೆ ಬೇಸಾಯ ಒಂದು ಕಲಿಯೋದ್ಕೆತೆ ನೋಡಿ. ಇಲಾಖೆಯೋರು ಎರಡು ಬಾರಿ ಬಂದ್ ಹೋದ್ರು. ಉಳಿದವರ್‌ಯಾರೂ ಕಲೀಲಿಕ್ಕೆ ಬರ್ತಿಲ್ಲ... ಹಿಂಗಾಗಿ ಅದೊಂದು ಮಾಡಕ್ಕೆ ಆಗ್ತಾ ಇಲ್ಲ' ಹೀಗೆಂದು ವ್ಯಥೆಪಡುತ್ತಿದ್ದರು ಇಂದಿರಮ್ಮ. 63 ವರ್ಷ ವಯಸ್ಸಿನ ರೈತ ಮಹಿಳೆ ಇಂದಿರಮ್ಮ ಅವರಿಗೆ ಇನ್ನೂ ಕೃಷಿ ಕಲಿಕೆಯ ಉತ್ಸಾಹ.

ಕಳೆದ 35 ವರ್ಷಗಳಿಂದ ಹೊಲ–ತೋಟದಲ್ಲಿ ದುಡಿದು ಹಣ್ಣಾದ ಅವರು ಇನ್ನೂ ಹೊಸದನ್ನು ಕಲಿತು ಪ್ರಯೋಗಿಸುವ ತವಕದಲ್ಲಿದ್ದಾರೆ. ಅವರ ಕ್ರಿಯಾಶೀಲ ಮನಸ್ಸು, ಚಟುವಟಿಕೆಯ ಕಾಯಕದಿಂದಾಗಿ ಅವರ ನಾಲ್ಕೆಕರೆಯ ಹೊಲ ಹಸಿರಿನಿಂದ ನಳನಳಿಸುತ್ತಿದೆ. ಈ ಹಸಿರಿನಲ್ಲೂ ರಾಸಾಯನಿಕದ ಘಾಟು ಇಲ್ಲ. ನೈಸರ್ಗಿಕ ಕೃಷಿಯ ಸೊಗಡು ಅರಳಿದೆ.

ಕೆ.ಆರ್. ನಗರ ತಾಲ್ಲೂಕಿನ ಹನುಮನಹಳ್ಳಿಯ ಇಂದಿರಮ್ಮ ಅವರು 'ಉತ್ತಮ ಕೃಷಿ ಮಹಿಳೆ' ಎಂಬ ಅಭಿದಾನ ಗಳಿಸಲು ಸಾಗಿ ಬಂದ ದಾರಿ ಸುಲಭದ್ದಲ್ಲ. ಇದೇ ತಾಲ್ಲೂಕಿನ ಕರ್ತಾಳುವಿನಲ್ಲಿ ಜನಿಸಿದ ಅವರಲ್ಲಿ ಕೃಷಿ ಆಸಕ್ತಿ ಮೊಳೆತಿದ್ದು ಬಾಲ್ಯದಿಂದಲೇ. ಸಾಮಾನ್ಯವಾಗಿ ಹಳ್ಳಿ ಹುಡುಗಿಯರಿಗೆ ಹೊಲ–ತೋಟಗಳಿಗೆ ಹೋಗಿ ಕೆಲಸ ಮಾಡುವುದು ಹೊಸದೇನೂ ಅಲ್ಲ. ಆದರೆ, ಇಂದಿರಮ್ಮ ಅವರ ತಂದೆ ಸೋಮಾರಾಧ್ಯ ಅವರೊಂದಿಗೆ ಅಡಿಕೆ ಕೃಷಿ ಹಾಗೂ ಮಾರಾಟ ಎರಡೂ ಪ್ರಕ್ರಿಯೆಗಳನ್ನೂ ಹತ್ತಿರದಿಂದ ಕಲಿತರು.

ಅಡಿಕೆ ಮಾರಾಟದ ಲೆಕ್ಕವನ್ನೂ ಬರೆದು ತಂದೆಗೆ ಸಹಾಯ ಮಾಡಿದವರು. ರೈತ ನಾಗಭೂಷಣ ಆರಾಧ್ಯ ಅವರೊಂದಿಗೆ ವಿವಾಹವಾದ ನಂತರ ಕೃಷಿಯಲ್ಲಿ ಇನ್ನಷ್ಟು ತೊಡಗಿಸಿಕೊಳ್ಳಲು ಅನುವಾಯಿತು.

ಇವರ ಉಳಿದ ಸಹೋದರ ಸಹೋದರಿಯರೆಲ್ಲ ಬೇರೆ, ಬೇರೆ ಕೆಲಸಗಳಿಗೆ ಹೋಗಿ ಜೀವನ ಕಟ್ಟಿಕೊಂಡಿದ್ದರೆ, ಇಂದಿರಮ್ಮ ಮಾತ್ರ ಕೃಷಿ ಬದುಕನ್ನು ಪ್ರವೇಶಿಸುವಂತಾಯಿತು. 'ಈ ಬಗ್ಗೆ ನನಗೇನೂ ಬೇಸರವಿಲ್ಲ. ಇದು ನನ್ನ ಆಸಕ್ತಿಯ ಕ್ಷೇತ್ರ. ಇದರಲ್ಲೇ ನನಗೆ ಪ್ರಶಸ್ತಿಗಳು ಬಂದಾಗ ನನ್ನ ತಮ್ಮ ಬಂದು ಅಪ್ಪಿಕೊಂಡು, ಈಗ ತಂದೆ ಇರಬೇಕಿತ್ತು ಎಂದು ಹೇಳಿ ಹರ್ಷದ ಕಣ್ಣೀರು ಸುರಿಸಿದ್ದ. ಆಗ ಧನ್ಯತಾ ಭಾವ ಮೂಡಿತ್ತು' ಎಂದು ಅವರು ಹೇಳಿದರು. ಈಗ ಸಂಬಂಧಿಕರೆಲ್ಲರೂ 'ಇಂದಿರಮ್ಮ ನೀವು ಕೃಷಿ ಮಾಡಿದ್ದೂ ಸಾರ್ಥಕ ಎನ್ನುತ್ತಾರೆ' ಎಂದು ಹೇಳಿ ಹರ್ಷಪಟ್ಟರು.

ಮದುವೆ ನಂತರ ಹೊಲದ ಕೆಲಸಗಳಲ್ಲಿ ಕೈಗೂಡಿಸುತ್ತಿದ್ದರಾದರೂ, ಅವರು ಸಾವಯವ ಕೃಷಿಯತ್ತ ಆಕರ್ಷಿತವಾದದ್ದು 2003ರಲ್ಲಿ. ಆ ವರ್ಷ ಹಳ್ಳಿಯಲ್ಲಿ ಆರಂಭಗೊಂಡ ಮಹಿಳಾ ಸ್ವಸಹಾಯ ಸಂಘಕ್ಕೆ ಸೇರಿದರು. ಸುತ್ತೂರು ಜೆಎಸ್‌ಎಸ್‌ನ ಕೃಷಿ ವಿಜ್ಞಾನ ಕೇಂದ್ರದವರು ಈ ಸಂಘದ ಮಹಿಳೆಯರಿಗೆ ಸಾವಯವ ಕೃಷಿ ಹಾಗೂ ಎರೆಹುಳು ಗೊಬ್ಬರ ತಯಾರಿಸುವ ಬಗ್ಗೆ ತರಬೇತಿ ನೀಡಿದಾಗ ಇಂದಿರಮ್ಮ ತಕ್ಷಣ ಕಾರ್ಯಪ್ರವೃತ್ತರಾದರು.

### ಪ್ರಶಸ್ತಿಗಳು

**ಸಾವಯವ ಕೃಷಿಯಲ್ಲಿ ತೊಡಗಿರುವ ಇವರಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ 2005ರಲ್ಲಿ 'ಜಿಲ್ಲಾಮಟ್ಟದ ಅತ್ಯುತ್ತಮ ರೈತ ಮಹಿಳೆ', 2009ರಲ್ಲಿ 'ಬಾನುಲಿ ಕೃಷಿ ರತ್ನ', 2011ರಲ್ಲಿ ಮೈಸೂರು ಜಿಲ್ಲಾಡಳಿತದಿಂದ 'ಕನ್ನಡ ರಾಜ್ಯೋತ್ಸವ', 2015ರಲ್ಲಿ 'ದಿ ಆರ್ಟ್ ಆಫ್ ಲಿವಿಂಗ್'ನಿಂದ ರಾಜ್ಯಮಟ್ಟದ ಸಾವಯವ ಕೃಷಿ ಸಮಾವೇಶದಲ್ಲಿ 'ಉತ್ತಮ ಕೃಷಿ ಮಹಿಳೆ' ಪ್ರಶಸ್ತಿ ಲಭಿಸಿವೆ.**

ತಮ್ಮ ಜಮೀನನ್ನು ಸಂಪೂರ್ಣ ರಾಸಾಯನಿಕ ಮುಕ್ತ ಮಾಡಲು ಪಣ ತೊಟ್ಟರು. 12 ಅಡಿ ಉದ್ದ 5.5 ಅಡಿ ಅಗಲದ ನಾಲ್ಕು ಎರೆಹುಳು ಗೊಬ್ಬರ ತೊಟ್ಟಿಯನ್ನು ಹೊಲದ ಬಳಿ ನಿರ್ಮಿಸಿಕೊಂಡರು. 2004ರಲ್ಲಿ ಇದಕ್ಕಾಗಿ ಅವರಿಗೆ ಕೃಷಿ ಇಲಾಖೆಯಿಂದ 25 ಸಾವಿರ ಸಹಾಯಧನ ಮಂಜೂರಾಯಿತು. ಆ ತೊಟ್ಟಿಗಳಲ್ಲಿ ಅವರೀಗ ಒಂದು ಬಾರಿಗೆ 6–8 ಟನ್‌ಗಳಷ್ಟು ಎರೆಹುಳು ಗೊಬ್ಬರ ತಯಾರಿಸುತ್ತಿದ್ದಾರೆ. ತಮ್ಮ ಹೊಲಕ್ಕೆ ಹಾಕುವುದಲ್ಲದೇ, ಇತರರಿಗೂ ಮಾರುತ್ತಾರೆ. ಎಲ್ಲ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳಿಗೆ ವಿದಾಯ ಹೇಳಿಬಿಟ್ಟಿದ್ದಾರೆ ಇಂದಿರಮ್ಮ.

ಮದುವೆಯಾಗಿ ಬಂದಾಗ ಕುಡಿಯುವ ನೀರು ತರುವುದಕ್ಕೆ ಬೆಳಿಗ್ಗೆ 4 ಗಂಟೆಗೆ ಎದ್ದು 2 ಕಿ.ಮೀ. ದೂರ ನಡೆದು ಹೋಗಬೇಕಿತ್ತು. ಅಲ್ಲಿಯೂ ಬಟ್ಟಲಿನಿಂದ ನೀರು ತೋಡಿಕೊಳ್ಳುವ ಪರಿಸ್ಥಿತಿ. ಮೊದಲು ಯಾರು ಹೋಗಿರುತ್ತಾರೋ ಅವರಿಗೆ ನೀರು ಸಿಗುತ್ತಿತ್ತು. ಭತ್ತ, ರಾಗಿ, ಹುರುಳಿ ಕಾಳುಗಳನ್ನು ಒಡ್ಡನಕೋಲಿನಲ್ಲಿ (ಬೆತ್ತದ ಕೋಲು) ಕುಟ್ಟಿಕೊಳ್ಳಬೇಕಿತ್ತು. ಇಂಥ ಕಷ್ಟಗಳು ಇಂದಿರಮ್ಮ ಅವರ ಕೃಷಿ ಬದುಕಿಗೆ ಮುಳ್ಳಾಗಲಿಲ್ಲ. ಬದಲಾಗಿ ಪರಿಸ್ಥಿತಿ ಸುಧಾರಿಸಲು ಪ್ರೇರಣೆ ಒದಗಿಸಿದವು. ಸಾವಯವ



ಕೃಷಿ ತರಬೇತಿ ಪಡೆದ ನಂತರ ಮೊದಲ ಬಾರಿ ಒಂದು ಎಕರೆಯಲ್ಲಿ ರಾಗಿ ಹಾಗೂ ಇನ್ನೊಂದು ಎಕರೆಯಲ್ಲಿ ಮುಸುಕಿನ ಜೋಳ ಬೆಳೆದೆ. 15 ಕ್ವಿಂಟಾಲ್ ರಾಗಿ, 10 ಕ್ವಿಂಟಾಲ್ ಮುಸುಕಿನ ಜೋಳದ ಬೆಳೆ ಬಂದಿತ್ತು. ಎರೆಹುಳು ಗೊಬ್ಬರ ಘಟಕ ಯಶಸ್ವಿಯಾದ ನಂತರ ಆಕಾಶವಾಣಿಯ ಹಸಿರುಸಿರಿಯಲ್ಲಿ ಇತರ ರೈತರಿಗೂ ಮಾರ್ಗದರ್ಶನ ಮಾಡಿದರು. 'ಬಾನುಲಿ ಕೃಷಿ ರತ್ನ' ಪ್ರಶಸ್ತಿಯೂ ಬಂತು. ತರಕಾರಿಗೆ ಒಳ್ಳೆಯ ಬೆಲೆ ಇದ್ದುದರಿಂದ ತರಕಾರಿ ಕೃಷಿ ಆರಂಭಿಸಿದರು.

ಅಡಿಕೆ, ತೆಂಗು, ಬಾಳೆ, ತರಕಾರಿ, ಬದನೆ, ಕೋಸು, ಟೊಮೆಟೊ, ಮೆಣಸು, ಹಾಗಲಕಾಯಿ ಮೊದಲಾದ ತರಕಾರಿಗಳನ್ನು ಬೆಳೆದು ಸೈ ಎನ್ನಿಸಿಕೊಂಡರು. ಭತ್ತ, ರಾಗಿ, ಅವರೆಕಾಳು, ಹುರುಳಿ, ಅಲಸಂದೆಗಳನ್ನು ಮನೆಗೆ ಬೇಕಾದಷ್ಟು ಮಾತ್ರ ಬೆಳೆಯುತ್ತಿದ್ದಾರೆ. ಈಚೆಗೆ ಅವರ ಹೊಸ ಸಾಧನೆ ಎಂದರೆ, 500ರಷ್ಟು ಅರಣ್ಯ ಸಸಿಗಳನ್ನು ಗದ್ದೆಯ ಬದುಗಳಲ್ಲಿ ನೆಟ್ಟು ಪೋಷಿಸುತ್ತಿದ್ದಾರೆ. ವಿವಿಧ ಔಷಧೀಯ ಸಸಿಗಳನ್ನು ಸಂಗ್ರಹಿಸಿ ತಂದು ನೆಡುತ್ತಿದ್ದಾರೆ. ಪೇರಲ, ಚಿಕ್ಕು, ಪಪ್ಪಾಯಿ ಮೊದಲಾದ ಹಣ್ಣುಗಳ ಗಿಡಗಳನ್ನೂ ಬೆಳೆಸಿದ್ದಾರೆ.

ಗ್ರಾಮದ ವಯಸ್ಕರಿಗೆ ಅಕ್ಷರ ಕಲಿಸಿದ್ದು ಇವರ ಇನ್ನೊಂದು ಸಾಧನೆಯಾದರೆ, ಮಹಿಳಾ ಸ್ವಸಹಾಯ ಸಂಘದ ಮೂಲಕ ಗೃಹೋದ್ಯಮವನ್ನು ನಡೆಸುತ್ತಿರುವುದು ಇನ್ನೊಂದು ಗಾಥೆಯಾಗಬಹುದು.

**ಕೃಪೆ: ಪ್ರಜಾವಾಣಿ**

ಸಂಪಾದಕೀಯ ಸಹಕಾರ: ಶ್ರೀಹರ್ಷಪೇರ್ಲ, ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಶ್ರೀವತ್ಸ ಸಿ.ಎಂ., ಪ್ರತಾಪ ಕೊಡಂಚ, ಶಶಾಂಕ್ ಹತ್ವಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

ಮುಂಬೈ ನಗರದ ಬಾಂದ್ರದ ರೌಷಾನ್ ಜವ್ವದ್ ತಮ್ಮ ಎಂ.ಬಿ.ಬಿ.ಎಸ್ ಅನ್ನು ಪ್ರಥಮ ದರ್ಜೆಯಲ್ಲಿ ಮುಗಿಸಿ, ಹಲವರಿಗೆ ಸ್ಫೂರ್ತಿಯಾಗಿದ್ದಾರೆ. ಇವರ ಸಾಧನೆಯನ್ನು ಇನ್ನೂ ವಿಸ್ತೀರ್ಣವಾಗಿ ಹೇಳುವುದಾದರೆ, ರೌಷಾನ್ ಹತ್ತನೆಯ ತರಗತಿಯಲ್ಲಿ ಶೇ. 92 ಅಂಕ ಪಡೆದ ಹುಡುಗಿ. ಆದರೆ ಒಂದು ದಿನ ರೈಲು ಅಪಘಾತದಿಂದ ತನ್ನ ಎರಡೂ ಕಾಲುಗಳನ್ನು ಕಳೆದುಕೊಂಡಳು. ಶೇ. 88ರಷ್ಟು ಅಂಗವೈಕಲ್ಯಕ್ಕೆ ತುತ್ತಾದಳು. ತನ್ನ ಬಾಲ್ಯ ದಿನದಿಂದಿದ್ದ ವೈದ್ಯಳಾಗುವ ಬಯಕೆಯೂ ಅದೇ ಕಾರಣಕ್ಕೆ ಕುಂಠಿತವಾಗುವುದಿತ್ತು. ಶೇ. 70ಕ್ಕಿಂತ ಕಡಿಮೆ ಅಂಗವೈಕಲ್ಯವಿರುವವರು ಮಾತ್ರ ವೈದ್ಯಕೀಯ ಶಿಕ್ಷಣವನ್ನು ತೆಗೆದುಕೊಳ್ಳಬಹುದು ಎಂಬ ನಿಯಮದ ವಿರುದ್ಧ ಕೋರ್ಟಿನ ಮೊರೆ ಹೋಗಿ, ಕೇಸು ಗೆದ್ದು ಈಗ ವೈದ್ಯರಾಗಿ ರೌಷಾನ್ ಹಲವರಿಗೆ ಸ್ಫೂರ್ತಿಯಾಗಿದ್ದಾರೆ.

**ತಂಬಾಕು ಉತ್ಪನ್ನಗಳು ತಮ್ಮ ಉತ್ಪನ್ನಗಳ ಪ್ಯಾಕುಗಳ ಮೇಲೆ ಶೇ. 85ರಷ್ಟು ದೊಡ್ಡದಾಗಿ ಸಚಿತ್ರ ಎಚ್ಚರಿಕೆ ನೀಡಬೇಕು ಹಾಗೂ ಈ ನಿಯಮ ಏಪ್ರೀಲ್ 1ರಿಂದಲೇ ಜಾರಿಯಾಗಬೇಕು ಎಂದು ಆರೋಗ್ಯ ಸಚಿವಾಲಯ ಅಧಿಸೂಚನೆ ಹೊರಡಿಸಿದೆ. ಸಿಗರೇಟು ಪ್ಯಾಕುಗಳ ಮೇಲೆ ದೊಡ್ಡದಾಗಿ ಸಚಿತ್ರ ಎಚ್ಚರಿಕೆ ಮುದ್ರಿಸಲು ಸರ್ಕಾರ ರೂಪಿಸಿರುವ ಹೊಸ ನಿಯಮಗಳನ್ನು ಪಾಲಿಸುವುದಾಗಿ ಹಾಗೂ ಈಗಾಗಲೇ ತನ್ನ ತಂಬಾಕು ಉತ್ಪನ್ನಗಳನ್ನು ತಾತ್ಕಾಲಿಕವಾಗಿ ಮಾರುಕಟ್ಟೆಯಿಂದ ಹಿಂದಕ್ಕೆ ಪಡೆಯಲಾಗಿದೆ ಎಂದು ಗಾಡ್‌ಫ್ರೆ ಫಿಲಿಪ್ಸ್ ಇಂಡಿಯಾ ಕಂಪೆನಿ ತಿಳಿಸಿದೆ.**



ಬಾಹ್ಯಾಕಾಶ ಕಾರ್ಯಕ್ರಮಗಳಿಗೆಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಭಿವೃದ್ಧಿಪಡಿಸಿರುವ ತಂತ್ರಜ್ಞಾನ ಮತ್ತು ಉಪಕರಣಗಳನ್ನು ಬಳಸಿಕೊಂಡರೆ, ಸಿಯಾಚಿನ್‌ನಲ್ಲಿ ಪ್ರಕೃತಿ ವಿಕೋಪಕ್ಕೆ ಬಲಿಯಾಗುವ ಸೈನಿಕರ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡಬಹುದು ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಗಗನಯಾನಿಗಳಿಗೆಂದು ಇಸ್ರೊ ಹಗುರವಾದ 'ಸ್ಪೇಸ್ ಸೂಟ್' ಅನ್ನು ಅಭಿವೃದ್ಧಿಪಡಿಸಿದೆ. ವಿಶ್ವದಲ್ಲಿ ಈವರೆಗೆ ಅಭಿವೃದ್ಧಿಪಡಿಸಿರುವ 'ಸ್ಪೇಸ್ ಸೂಟ್'ಗಳಲ್ಲಿ ಇದೇ ಅತ್ಯಂತ ಹಗುರವಾದದ್ದು. ಅವನ್ನು ತುಸು ಮಾರ್ಪಡಿಸಿ ಸಿಯಾಚಿನ್ ಸೈನಿಕರಿಗೆ ಒದಗಿಸಬಹುದು. ಹಗುರವಾಗಿರುವುದರಿಂದ ಇವು ಸೈನಿಕರಿಗೆ ಹೊರೆ ಆಗುವುದಿಲ್ಲ. ಜತೆಗೆ ಈಗ ಬಳಕೆಯಲ್ಲಿರುವ ಉಡುಪುಗಳಿಗಿಂತ ಈ ಸ್ಪೇಸ್ ಸೂಟ್‌ಗಳು ಸೈನಿಕರನ್ನು ಮತ್ತಷ್ಟು ಬೆಚ್ಚಗೆ ಇರಿಸುತ್ತವೆ. ಗಗನಯಾನಿಗಳ ಪತ್ತೆಗೆ ಬಳಸುವ ಕೈಗಡಿಯಾರದಂತಹ ರೇಡಿಯೊ ಸಂಕೇತ ಉಪಕರಣವನ್ನು ಸಿಯಾಚಿನ್ ಸೈನಿಕರಿಗೂ ನೀಡಬಹುದು. ಈ ಉಪಕರಣವನ್ನು ಧರಿಸಿದ್ದರೆ, ಸೈನಿಕರು ಎಷ್ಟೇ ಆಳದ ಹಿಮರಾಶಿಯ ಅಡಿ ಸಿಲುಕಿದ್ದರೂ ಕೆಲವೇ ನಿಮಿಷಗಳಲ್ಲಿ ಉಪಗ್ರಹಗಳ ನೆರವಿನಿಂದ ಅತ್ಯಂತ ಕರಾರುವಕ್ಕಾಗಿ ಪತ್ತೆ ಮಾಡಬಹುದು ಎಂದು ತಿರುವನಂತಪುರದ ವಿಕ್ರಂ ಸಾರಾಭಾಯ್ ಬಾಹ್ಯಾಕಾಶ ಕೇಂದ್ರದ ನಿರ್ದೇಶಕ ಕೆ. ಶಿವನ್ ತಿಳಿಸಿದ್ದಾರೆ.

**ಕಳೆದ 57 ವರ್ಷಗಳಿಂದ ಮಿಥಾಲಾಲ್ ಸಿಂಧಿಯವರು ಅಹಮದಾಬಾದಿನ ಅನಾಥ ಶವಗಳಿಗೆ ಅಂತ್ಯಕ್ರಿಯೆ ಮಾಡುವ ಅಪೂರ್ವ ನಿಸ್ವಾರ್ಥ ಸೇವೆಯಲ್ಲಿ ತೊಡಗಿಕೊಂಡಿದ್ದಾರೆ. ಯಾರೂ ಗತಿಯಿರದ ಪಾರ್ಥಿವ ಶರೀರಗಳಿಗೆ ತಾನೇ ಹೆಗಲು ಕೊಟ್ಟು ಅವುಗಳ ಸಂಸ್ಕಾರ ಮಾಡುತ್ತಿದ್ದಾರೆ. 83ರ ಈ ಹಿರಿಯ ಇವತ್ತಿನವರೆಗೂ ಸುಮಾರು 550 ಅನಾಥ ಶವಗಳಿಗೆ ಅಂತ್ಯಕ್ರಿಯೆ ಮಾಡಿದ್ದಾರೆ. ಸಿಂಧಿಯವರಿಗೆ ತನ್ನದೆನ್ನುವ ಸೂರೂ ಇಲ್ಲ. ರಸ್ತೆಬದಿಯಲ್ಲೇ ಅವರ ನಿವಾಸ. ಆದರೆ ಇದರ ಬಗ್ಗೆ ಸ್ವಲ್ಪವೂ ಬೇಸರಿಸದ ಮಿಥಾಲಾಲ್ ದೇವರೇ ತನ್ನನ್ನು ಈ ಕೆಲಸಕ್ಕೆ ಭೂಮಿಗೆ ಕಳುಹಿಸಿದ್ದು ಎಂದು ಅಭಿಮಾನದಿಂದ ನುಡಿಯುತ್ತಾರೆ.**



ಜೈಪುರದ ರೈಲ್ವೇ ನಿಲ್ದಾಣದಲ್ಲಿ ಸೌರಘಟಕಗಳನ್ನು ಅಳವಡಿಸಲಾಗಿದ್ದು, ಇನ್ನು ಮುಂದೆ ಡೀಸೆಲ್ ಅಥವಾ ವಿದ್ಯುತ್ತಿನ ಹಂಗಿಲ್ಲದೆ ಸೌರಶಕ್ತಿಯಿಂದಲೇ ಸಂಪೂರ್ಣ ರೈಲ್ವೇ ನಿಲ್ದಾಣ ಬೆಳಗಲಿದೆ. ಸೌರಪ್ಯಾನೆಲ್‌ಗಳನ್ನು ಅಳವಡಿಸಿದ ಮೊದಲ ದಿನವೇ 260 ಯೂನಿಟ್ ವಿದ್ಯುತ್ ಉತ್ಪಾದಿಸಿದ ಇಲ್ಲಿನ ಸೌರ ಘಟಕ ನಿತ್ಯದ ಸಾಮರ್ಥ್ಯಕ್ಕಿಂತ 35 ಯೂನಿಟ್‌ಗಳಷ್ಟು ಅಧಿಕ ಸೌರವಿದ್ಯುತ್ ಉತ್ಪಾದಿಸಿದೆ. ನಿಲ್ದಾಣದ ಅಧಿಕಾರಿಗಳ ಪ್ರಕಾರ ಸೌರ ವಿದ್ಯುತ್ ಬಳಕೆಯಿಂದ ಸುಮಾರು 7.2 ಲಕ್ಷ ಹಣ ಉಳಿತಾಯವಾಗಲಿದೆ. ವರ್ಷಕ್ಕೆ 50 ಕಿಲೋವ್ಯಾಟ್ ಉತ್ಪಾದಿಸುವ ಗುರಿಯನ್ನು ನಿಲ್ದಾಣದ ಅಧಿಕಾರಿಗಳು ಹೊಂದಿದ್ದಾರೆ. ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರೈಲ್ವೇ ಇಲಾಖೆಯಲ್ಲಿ ಇಂತಹ ಅನೇಕ ಬದಲಾವಣೆಗಳನ್ನು ನಾವು ಕಾಣಬಹುದು.

## ಸಾಲುದ್ದದ ಸುದ್ದಿಗಳು

**ಜಗತ್ತಿನ ಶೇ. 25ರಷ್ಟು ಅಸಹಜ ಸಾವಿಗೆ ಕಲುಷಿತ ನೀರು, ಗಾಳಿ, ಮಣ್ಣು, ರಸ್ತೆ ಹಾಗೂ ಕೆಲಸ ಮಾಡುವ ಪರಿಸರಗಳೇ ಕಾರಣವಾಗಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತನ್ನ ವರದಿಯಲ್ಲಿ ತಿಳಿಸಿದೆ. ವಾಸಿಸುವ ಮತ್ತು ಕೆಲಸ ಮಾಡುವ ವಾತಾವರಣದ ಶುದ್ಧಿಯೆಡೆಗೆ ಗಂಭೀರ ಪ್ರಯತ್ನ ಮಾಡದೆ ಹೋದಲ್ಲಿ ಜನರು ಅನಾರೋಗ್ಯಕ್ಕೆ ಒಳಗಾಗುವುದು ಮತ್ತು ಎಳವೆಯಲ್ಲಿ ಸಾವಿಗೀಡಾಗುವುದು ಮುಂದುವರಿಯಲಿದೆ ಎಂದು ಸಂಸ್ಥೆಯ ಮುಖ್ಯಸ್ಥೆ ಮಾರ್ಗರೆಟ್ ಚಾನ್ ಅಭಿಪ್ರಾಯಪಟ್ಟಿದ್ದಾರೆ.**



ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಮತ್ತು ಭಾರತೀಯ ನಿರ್ವಹಣಾ ಸಂಸ್ಥೆಗಳು (ಐಐಎಂ, ಬೆಂಗಳೂರು) ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ರ್‍ಯಾಂಕಿಂಗ್ ಪಟ್ಟಿಯಲ್ಲಿ ಕ್ರಮವಾಗಿ ವಿಶ್ವವಿದ್ಯಾಲಯ ಮತ್ತು ಭಾರತೀಯ ನಿರ್ವಹಣಾ ಸಂಸ್ಥೆಗಳ (ಐಐಎಂ) ವಿಭಾಗಗಳಲ್ಲಿ ಮೊದಲ ಸ್ಥಾನ ಪಡೆದಿವೆ. ನಿರ್ವಹಣಾ ಸಂಸ್ಥೆಗಳ ಪಟ್ಟಿಯಲ್ಲಿ ಐಐಎಂ–ಅಹಮದಾಬಾದ್ ಎರಡನೇ ಸ್ಥಾನ ತನ್ನದಾಗಿಸಿಕೊಂಡಿದೆ. ಕೋಲ್ಕತ್ತ, ಲಖನೌ ಮತ್ತು ಉದಯಪುರ ಐಐಎಂಗಳು ಕ್ರಮವಾಗಿ ಮೂರರಿಂದ ಐದರವರೆಗಿನ ಸ್ಥಾನಗಳನ್ನು ಪಡೆದುಕೊಂಡಿವೆ. ಶ್ರೇಷ್ಠ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಐಐಎಸ್‌ಸಿ ಬೆಂಗಳೂರಿನ ನಂತರದ ಸ್ಥಾನ ಮುಂಬೈನ ಇನ್‌ಸ್ಟಿಟ್ಯೂಟ್ ಆಫ್ ಕೆಮಿಕಲ್ ಟೆಕ್ನಾಲಜಿ ಸಂಸ್ಥೆಗೆ ಲಭಿಸಿದೆ. ಜೆಎನ್‌ಯು, ಎಚ್‌ಸಿಯು ಮತ್ತು ಅಸ್ಸಾಂನ ತೇಜ್‌ಪುರ ವಿ.ವಿ.ಗಳು ಕ್ರಮವಾಗಿ ಮೂರರಿಂದ ಐದರವರೆಗಿನ ಸ್ಥಾನಗಳನ್ನು ತಮ್ಮದಾಗಿಸಿಕೊಂಡಿವೆ. ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪಟ್ಟಿಯಲ್ಲಿ ಚೆನ್ನೈನ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ ಮದ್ರಾಸ್) ಅಗ್ರಸ್ಥಾನ ಪಡೆದಿದೆ. ಬಾಂಬೆ, ಖರಗ್‌ಪುರ, ದೆಹಲಿ ಮತ್ತು ಕಾನ್ಪುರ ಐಐಟಿಗಳು ಕ್ರಮವಾಗಿ ಎರಡರಿಂದ ಐದರವರೆಗಿನ ಸ್ಥಾನಗಳನ್ನು ಪಡೆದಿವೆ. ಕರ್ನಾಟಕದ ಸುರತ್ಕಲ್‌ನಲ್ಲಿರುವ ಎನ್‌ಐಟಿಕೆ 22ನೇ ಸ್ಥಾನದಲ್ಲಿ ಕಾಣಿಸಿಕೊಂಡಿದೆ. ಔಷಧ ವಿಜ್ಞಾನಗಳ ಕಾಲೇಜುಗಳ ಪೈಕಿ ಚಂಡೀಗಡದ ಔಷಧ ವಿಜ್ಞಾನಗಳ ವಿ.ವಿ ಮತ್ತು ನವದೆಹಲಿಯ ಜಾಮಿಯಾ ಹಮ್‌ದರ್ದ್ ವಿ.ವಿ ಕ್ರಮವಾಗಿ 2ಮತ್ತು 3ನೇ ಸ್ಥಾನ ಪಡೆದಿವೆ.

**ಭಾರತದ ಅತೀ ವೇಗದ ರೈಲಿಗೆ ಏಪ್ರಿಲ್ 5 ರಂದು ಚಾಲನೆ ಸಿಗಲಿದೆ. ದಿಲ್ಲಿ ಯಿಂದ ಆಗ್ರಾಗೆ ಪಯಣಿಸುವ ಈ 'ಗತಿಮಾನ್ ಎಕ್ಸ್‌ಪ್ರೆಸ್' ರೈಲಿಗೆ, ದೆಹಲಿಯ ಹಜರತ್ ನಿಜಾಮುದ್ದೀನ್ ನಿಲ್ದಾಣದಲ್ಲಿ ರೈಲ್ವೇ ಸಚಿವ ಸುರೇಶ್ ಪ್ರಭು ಚಾಲನೆ ನೀಡಿದ್ದಾರೆ. ಇದು 100 ನಿಮಿಷಗಳಲ್ಲಿ 184 ಕಿ.ಮೀ ದೂರ ಕ್ರಮಿಸಲಿದ್ದು, ಇದರ ಗರಿಷ್ಠ ವೇಗ ಪ್ರತಿ ಗಂಟೆಗೆ 160 ಕಿ.ಮೀ ಆಗಿರುತ್ತದೆ. ಪ್ರತಿ ಗಂಟೆಗೆ 150 ಕಿ.ಮೀ ಗರಿಷ್ಠ ವೇಗ ಹೊಂದಿರುವ 'ಭೋಪಾಲ್ ಶತಾಬ್ಧಿ' ಈವರೆಗೂ ದೇಶದ ಅತೀ ವೇಗದ ರೈಲಾಗಿತ್ತು.**

## ಮೊಬೈಲಿನ ನೆನಪುಶಕ್ತಿ ಮತ್ತು ಸಾಮರ್ಥ್ಯ




ಸ್ಮಾರ್ಟ್ ಫೋನುಗಳಲ್ಲಿ ನಿಮ್ಮ ಮಾಹಿತಿ, ಸಂಪರ್ಕ, ಚಿತ್ರ, ವಿಡಿಯೋ ಮತ್ತಿತರ ಕಡತಗಳನ್ನು ನೀವು ಶೇಖರಿಸಿಡುತ್ತೀರಿ. ಇದಕ್ಕಾಗಿ ಕಂಪ್ಯೂಟರ್ ಹಾಗೂ ಮೊಬೈಲುಗಳಲ್ಲಿ "ಮೆಮೊರಿ" ಎಂಬ ಸಾಮರ್ಥ್ಯವನ್ನು ಅಳವಡಿಸುತ್ತಾರೆ. ಮೂರು ರೀತಿಯ ಮೆಮೊರಿಗಳನ್ನು ಫೋನುಗಳು ಹೊಂದಿರುತ್ತವೆ.

RAM ಮೆಮೊರಿ: ಮೊಬೈಲ್ ಕಾರ್ಯನಿರ್ವಹಿಸುವಾಗ ತಂತ್ರಾಂಶಗಳಿಗೆ ಬೇಕಾದ ಮಾಹಿತಿಗಳನ್ನು ತಾತ್ಕಾಲಿಕವಾಗಿ ಶೇಖರಿಸಲು ಮತ್ತು ಬಳಸಲು ಬೇಕಾದ ಮೊಮೊರಿ. ಇದು ಜಾಸ್ತಿಯಿದ್ದಷ್ಟೂ ಮೊಬೈಲ್ ವೇಗವಾಗಿ ಕೆಲಸಮಾಡುತ್ತದೆ. ನೀವು ಹಲವು APP ಮತ್ತು ಆಟಗಳನ್ನು ಬಳಸುತ್ತಿರುತ್ತೀರಿ ಎಂದಾದಲ್ಲಿ ಜಾಸ್ತಿ RAM ಇರುವ ಮೊಬೈಲ್ ಅಗತ್ಯ.

ಆಂತರಿಕ ಶೇಖರಣೆ: ಇದು ಮೊಬೈಲ್ ಜೊತೆಗೇ ಬರುವ ಶೇಖರಣಾ ವ್ಯವಸ್ಥೆ. ಇದರ ಒಂದು ಭಾಗ ಕಾರ್ಯ ನಿರ್ವಹಣಾ ತಂತ್ರಾಂಶ (ಆಂಡ್ರಾಯ್ಡ್, ಐಓಎಸ್, ವಿಂಡೋಸ್ ಇತ್ಯಾದಿ) ಕ್ಕೆ ಬಳಕೆಯಾಗುತ್ತದೆ. ನೀವು ಬಳಸುವ ಆಪ್‌ಗಳೂ, ಅದರ ಮಾಹಿತಿ, ಕಡತಗಳೂ ಇದರಲ್ಲೇ ಉಳಿದುಕೊಳ್ಳುತ್ತವೆ. ಆಂತರಿಕ ಮೊಮೊರಿಯನ್ನು ಬದಲಾಯಿಸುವ ಅವಕಾಶವಿಲ್ಲದ ಕಾರಣ ಮೊಬೈಲ್ ಕೊಳ್ಳುವಾಗಲೇ ನಿಮಗೆ ಸೂಕ್ತವಾಗುವ ಸಾಮರ್ಥ್ಯವಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು.

ಬಾಹ್ಯ ಶೇಖರಣೆ: ಬಹುತೇಕ ಸ್ಮಾರ್ಟ್ ಫೋನುಗಳು ಬಾಹ್ಯ ಶೇಖರಣೆ ಮೂಲಕ ಮೊಮೊರಿ ಸಾಮರ್ಥ್ಯವನ್ನು ಹೆಚ್ಚಿಸುವ ಅವಕಾಶ ನೀಡುತ್ತವೆ. ನೀವು ಎಸ್.ಡಿ ಕಾರ್ಡ್ ಎಂಬ ಶೇಖರಣಾ ಚಿಪ್ ಬಳಸಿ ಇದನ್ನು ಹೆಚ್ಚಿಸಿಕೊಳ್ಳಬಹುದು.

ನಿಮ್ಮ ಮೊಬೈಲಿನಲ್ಲಿ ಸ್ಥಳಾವಕಾಶವಿಲ್ಲ ಎಂಬ ಸೂಚನೆ ಬರುತ್ತಿದ್ದರೆ, ಅಗತ್ಯವಿಲ್ಲದ ಕಡತಗಳನ್ನು, ಚಿತ್ರ, ವಿಡಿಯೋಗಳನ್ನು ಡಿಲೀಟ್ ಮಾಡಿ ನೋಡಿ. ಇದಕ್ಕಾಗಿ ನೀವು ಫೈಲ್ ಮ್ಯಾನೇಜರ್ ಎಂಬ ಆಪ್ ಬಳಸಬಹುದು. ಅಥವಾ ಸೆಟ್ಟಿಂಗ್ –> ಸ್ಟೋರೇಜ್ ಅವಕಾಶವನ್ನು ಬಳಸಬಹುದು. ನಿಮ್ಮ ವಾಟ್ಸಾಪ್ ಸಂದೇಶಗಳು, ಚಿತ್ರ, ವಿಡಿಯೋಗಳನ್ನು ಡಿಲೀಟ್ ಮಾಡುವ ಅವಕಾಶವೂ ಅಲ್ಲಿ ಸಿಗುತ್ತದೆ. ನಿಮಗೆ ಅಗತ್ಯವಿಲ್ಲದ ಆಪ್‌ಗಳನ್ನು ತೆಗೆದುಹಾಕುವುದರಿಂದ ಸ್ಥಳಾವಕಾಶ ಹೆಚ್ಚುವುದಷ್ಟೆ ಅಲ್ಲ, ಮೊಬೈಲ್ ಕಾರ್ಯನಿರ್ವಹಿಸುವ ವೇಗವೂ ಹೆಚ್ಚುತ್ತದೆ.

ಇನ್ನು ಅಗತ್ಯವಿರುವ ಫೈಲ್‌ಗಳನ್ನು ಆಂತರಿಕ ಮೊಮೊರಿಯಿಂದ ಬಾಹ್ಯ ಮೊಮೊರಿಗೆ ವರ್ಗಾಯಿಸಬಹುದು. ಇದಕ್ಕಾಗಿ ಫೈಲ್ ಮ್ಯಾನೇಜರ್ ಬಳಸಿ ಮೂಲ ಕಡತ ಇರುವಲ್ಲಿ ಹೋಗಿ "ಒಂತಜ" ಅವಕಾಶನ್ನು ಬಳಸಿ, ನಂತರ ಬಾಹ್ಯ ಮೆಮೊರಿಯಲ್ಲಿರುವ ಹೊಸ ಫೋಲ್ಡರ್ ಆಯ್ದುಕೊಳ್ಳಿ.

ಕ್ಯಾಮರಾ ಮತ್ತಿತರ ಆಪ್‌ಗಳಲ್ಲಿ ನೀವು ಸೆರೆ ಹಿಡಿದ ಚಿತ್ರ/ವಿಡಿಯೋ ಎಲ್ಲಿ ಶೇಖರಣೆಯಾಗಬೇಕು ಎಂಬ ಆಯ್ಕೆ ಮಾಡುವ ಅವಕಾಶವನ್ನು ಠಿಣಿಬಠಿ ಅಲ್ಲಿ ನೀಡಿರುತ್ತಾರೆ. ನೀವು ಬಾಹ್ಯ ಮೆಮೊರಿಯಲ್ಲಿ ಸೇವ್ ಆಗುವಂತೆ ಮಾಡಿ ಆಂತರಿಕ ಮೆಮೊರಿ ಬಳಕೆಯನ್ನು ಕಡಿಮೆಗೊಳಿಸಬಹುದು.

## ಬದುಕು ಸವಾಲುಗಳ ರಣರಂಗ...



ಜೀವನವೇ ಹಾಗೆ! ಅದೊಂದು ಸವಾಲುಗಳ ರಣರಂಗ. ಇಲ್ಲಿ ನಿತ್ಯವೂ ಕಷ್ಟಗಳೊಂದಿಗೆ ಯುದ್ಧ ಮಾಡಲೇಬೇಕು. ವಿಶ್ವಾಸ, ಪರಿಶ್ರಮ, ಸತ್ಯ, ಸನ್ನಡತೆ ಎಂಬ ಆಯುಧಗಳ ಮೂಲಕ ಕೆಟ್ಟದ್ದನ್ನು ನಿರ್ನಾಮ ಮಾಡುತ್ತ ಸಾಧನೆಯ ಗುರಿ ತಲುಪುವುದೇ ನಿಜವಾದ ಮನುಷ್ಯತ್ವ ಎನ್ನುತ್ತಾರೆ ಪ್ರಾಜ್ಞರು.

**ಶ್ವೇತಾ ಸೋನಿ:** ಉತ್ತರ ಪ್ರದೇಶ ಮೂಲದ ಶ್ವೇತಾ ಸೋನಿಗೆ ಆಗಿನ್ನು 18 ವರ್ಷ. ವಿಜ್ಞಾನದಲ್ಲಿ ಪಿಯುಸಿ ಓದುತ್ತಿದ್ದ ಸೋನಿ ಎಂಜಿನಿಯರ್, ಡಾಕ್ಟರ್, ಐಎಎಸ್ ಅಧಿಕಾರಿಯಾಗಬೇಕೆಂಬ ಗುರಿ ಹೊಂದಿದ್ದರು! ಆದರೆ ಪಿಯುಸಿಯಲ್ಲಿ ಕಡಿಮೆ ಅಂಕ ಬಂದಿದ್ದರಿಂದ ಅಂದುಕೊಂಡಿದ್ದ ಗುರಿಯ ಸಾಧನೆಗಾಗಿ ಕನಿಷ್ಠ ಒಂದು ಹೆಜ್ಜೆಯನ್ನೂ ಮುಂದೆ ಇಡಲು ಸಾಧ್ಯವಾಗಲಿಲ್ಲ. ಕೊನೆಗೆ ಅಜ್ಜಿ ವಾಸವಾಗಿದ್ದ ಜೈಪುರಕ್ಕೆ ತೆರಳಿ ಚಿತ್ರಕಲೆಯಲ್ಲಿ ಪದವಿ ಪಡೆದರು.

ಮುಂದೆ, ಮನೆಯವರ ಒತ್ತಾಯಕ್ಕೆ ಮಣಿದು ಮದುವೆ ಮಾಡಿಕೊಂಡರು. ಇಬ್ಬರು ಮಕ್ಕಳೊಂದಿಗೆ ಸುಖ ಸಂಸಾರ ನಡೆಸುತ್ತಿರುವಾಗ ಪತಿ ಕಾಯಿಲೆಗೆ ಬಿದ್ದು ಹಾಸಿಗೆ ಹಿಡಿದರು. ಆಗಿನ್ನೂ ಶ್ವೇತಾಗೆ 30 ವರ್ಷ ಕೂಡ ತುಂಬಿರಲಿಲ್ಲ. ಪತಿಯ ಔಷಧಿ ಖರ್ಚು, ಹಾರೈಕೆ, ಮನೆ ನಿರ್ವಹಣೆ, ಮಕ್ಕಳ ಜವಾಬ್ದಾರಿ ಶ್ವೇತಾ ಹೆಗಲಿಗೆ ಬಿತ್ತು. ಎಂದೂ ಕೆಲಸಕ್ಕೆ ಹೋಗದಿದ್ದ ಶ್ವೇತಾ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದರು. ತುಂಬಾ ಪ್ರೀತಿಸುವ ಗಂಡ ಹಾಗೂ ಮುದ್ದು ಮಕ್ಕಳನ್ನು ನೋಡುತ್ತಲೇ ಧೈರ್ಯ ತಂದುಕೊಂಡರು.

ಧೃತಿಗೆಡದೇ ಕೆಲಸದ ಮಾರ್ಗ ಹುಡುಕತೊಡಗಿದರು. ಜೈಪುರದ ಗೆಳತಿಯಿಂದ ಒಂದು ಬಟ್ಟೆ ಹೊಲಿಯುವ ಯಂತ್ರವನ್ನು ಸಾಲವಾಗಿ ಪಡೆದರು. ಮನೆಯಲ್ಲಿ ಕುಳಿತು ವಿವಿಧ ವಿನ್ಯಾಸದ ಮಕ್ಕಳ ಬಟ್ಟೆಗಳನ್ನು ಹೊಲೆದು ಅವುಗಳ ಚಿತ್ರವನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸಿದರು. ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಗ್ರಾಹಕರು ಕೊರಿಯರ್ ಮೂಲಕ ಉಡುಪುಗಳನ್ನು ತರಿಸಿಕೊಳ್ಳತೊಡಗಿದರು. ಹೀಗೆ ಸಣ್ಣದಾಗಿ ಆರಂಭವಾದ ಮಕ್ಕಳ ಬಟ್ಟೆ ಉದ್ಯಮ ಎರಡೇ ವರ್ಷಗಳಲ್ಲಿ ಆಸ್ಟ್ರೇಲಿಯಾಕ್ಕೆ ರಫ್ತು ಮಾಡುವ ಮಟ್ಟಕ್ಕೆ ಬೆಳೆದಿದೆ. ಅಂಬೆರ್ ಜೈಪುರ್ ಎಂಬ ಹೆಸರಿನಲ್ಲಿ ಶ್ವೇತಾ ನಡೆದ ಮಕ್ಕಳ ಸಿದ್ಧ ಉಡುಪು ಉದ್ಯಮದಲ್ಲಿ ಪ್ರಸ್ತುತ ಎಂಟು ಜನ ನೌಕರರು ಕೆಲಸ ಮಾಡುತ್ತಿದ್ದಾರೆ. ಮುಂದಿನ ಎರಡು ವರ್ಷಗಳಲ್ಲಿ ನೌಕರರ ಸಂಖ್ಯೆಯನ್ನು 50ಕ್ಕೆ ಏರಿಸುವ ಗುರಿ ಹೊಂದಿದ್ದಾರೆ. ಪ್ರಸ್ತುತ ಸಾಂಪ್ರದಾಯಿಕ ತೊಡುಗೆಗಳಾದ ಲೆಹಂಗಾ ಚೋಲಿ, ಕುರ್ತಾ, ಪೈಜಾಮ್ ಹಾಗು ನೆಹರೂ ಜಾಕೆಟ್‌ಗಳನ್ನು ಮಾತ್ರ ತಯಾರಿಸುತ್ತಿದ್ದಾರೆ. ದಿಟ್ಟತನದಿಂದ ಮುನ್ನುಗ್ಗಿದರೆ ಯಾರು ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಶ್ವೇತಾ ಮಾದರಿಯಾಗಿದ್ದಾರೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-4-2016






ಭಾರತೀಯ ಪ್ರಜ್ಞಾಪರಂಪರೆಯಲ್ಲಿ ಆಚಾರ್ಯ ಅಭಿನವಗುಪ್ತರ ಹಿರಿಮೆ ಸಾವಿರಾರು ವರ್ಷಗಳಿಂದಲೂ ಜನಮಾನಸದಲ್ಲಿ ಉಳಿದು ಬಂದಿದೆ. ಹತ್ತನೇ ಶತಮಾನದ ಕೊನೆಯ ಭಾಗದಲ್ಲಿ ಕಾಶ್ಮೀರದಲ್ಲಿ ಜೀವಿಸಿದ್ದ ಅಭಿನವಗುಪ್ತಪಾದರು ಶಿವನ ಅವತಾರವೆಂದೇ ಪ್ರಸಿದ್ಧರು. ಕಲಾಮೀಮಾಂಸೆ, ಭಾಷೆ, ತಂತ್ರಶಾಸ್ತ್ರಗಳಲ್ಲದೇ ಕಾಶ್ಮೀರ ಶೈವದರ್ಶನದ ಪ್ರತ್ಯಭಿಜ್ಞಾತತ್ವಕ್ಕೆ ಮೆರುಗು ಕೊಟ್ಟವರು.

ಭಾರತೀಯ ಕಲಾವಿಶ್ವಕೋಶವೆಂದೇ ಖ್ಯಾತವಾಗಿರುವ ಭರತನ ನಾಟ್ಯಶಾಸ್ತ್ರಕ್ಕೆ ಅಭಿನವಗುಪ್ತರು ಬರೆದ 'ಅಭಿನವಭಾರತೀ' ಎಂಬ ವ್ಯಾಖ್ಯಾನ ಮತ್ತು ಆನಂದವರ್ಧನನ ಧ್ವನ್ಯಾಲೋಕಕ್ಕೆ ರಚಿಸಿರುವ ಲೋಚನ ವ್ಯಾಖ್ಯಾನವೂ ಭಾರತೀಯ ಕಲಾಮೀಮಾಂಸೆಯ ಮಹತ್ವವನ್ನು ಎತ್ತಿಹಿಡಿದಿದೆ. ತಂತ್ರಶಾಸ್ತ್ರವನ್ನು ಕುರಿತ ಅವರ ತಂತ್ರಾಲೋಕ, ತಂತ್ರಸಾರ, ಪರಾತ್ರಿಂಶಿಕವಿವರಣ, ಭಗವದ್ಗೀತಾರ್ಥಸಂಗ್ರಹ, ಪರಮಾರ್ಥಸಾರ ಮೊದಲಾದ ನಲವತ್ತಕ್ಕೂ ಹೆಚ್ಚು ಕೃತಿಗಳ ಕರ್ತೃ ಅವರು.

ಕಾಶ್ಮೀರದೇಶ ಪ್ರಾಚೀನ ಕಾಲದಿಂದಲೂ ಶಾರದಾಪೀಠವೆಂದೇ ಪ್ರಸಿದ್ಧಿಯನ್ನು ಪಡೆದಿತ್ತು. ಆ ಪರಂಪರೆಯ ಸಮಗ್ರ ಸ್ವರೂಪವನ್ನು ಅಭಿನವಗುಪ್ತರಲ್ಲಿ ಕಾಣಬಹುದು. ಇಡಿಯ ಭಾರತೀಯ ಬೌದ್ಧಿಕ ಮತ್ತು ಆಧ್ಯಾತ್ಮಿಕ ಪರಂಪರೆಯ ಸಮರ್ಥ ವಾರಸಿಕೆಯನ್ನು ಎತ್ತಿಹಿಡಿದ ಅವರ ವ್ಯಕ್ತಿತ್ವ ಮತ್ತು ಕೃತಿಗಳು ಆಧುನಿಕ ಕಾಲಕ್ಕೂ ಸಲ್ಲುವಂಥವು. ಅವರ ರಸ-ಧ್ವನಿ ಸಿದ್ಧಾಂತಗಳು ಜಗತ್ತಿನ ಸೌಂದರ್ಯಮೀಮಾಂಸೆಗೆ ಅನನ್ಯವಾದ ಕೊಡುಗೆಯೆನಿಸಿವೆ. ನಮ್ಮ ಕಾಲದಲ್ಲಿ ಬಹಳ ಚರ್ಚೆಗೆ ಒಳಗಾಗಿರುವ ವಿಷಯಗಳಲ್ಲಿ ಒಂದು ಪ್ರಜ್ಞೆಯ ಮೀಮಾಂಸೆ. ವಿಜ್ಞಾನ, ಕಲೆ, ಸಾಹಿತ್ಯ – ಹೀಗೆ ಹಲವು ಕ್ಷೇತ್ರಗಳಲ್ಲಿ ಇದರ ಬಗ್ಗೆ ಜಿಜ್ಞಾಸೆ ಇಂದು ನಡೆಯುತ್ತಿದೆ. ಅಭಿನವಗುಪ್ತರ ಕೃತಿಗಳಲ್ಲಿ ಪ್ರಜ್ಞೆಯ ಹಲವು ಸ್ತರಗಳ ವಿಶ್ಲೇಷಣೆ ಆಳವಾಗಿ ನಡೆದಿದೆ. ಆದುದರಿಂದ ಅವರ ಕೃತಿಗಳು ಇಂದಿನ ಕಾಲಕ್ಕೆ ಮತ್ತೂ ಒದಗುವಂತಿವೆ. ವಿದೇಶಗಳಲ್ಲಿ ಕೂಡ ಅಭಿನವಗುಪ್ತರ ಚಿಂತನೆಗಳ ಅಧ್ಯಯನ ನಡೆಯುತ್ತಿರುವುದು ಇಲ್ಲಿ ಉಲ್ಲೇಖಾರ್ಹ. 'ಭಾರತೀಯ ಪ್ರಜ್ಞಾಪ್ರವಾಹಿನಿಯ ಶಿಖರಗಳಾಗಿ ಮೂರು ತತ್ತ್ವಜ್ಞಾನಿಗಳು ನಿಲ್ಲುತ್ತಾರೆ: ನಾಗಾರ್ಜುನ ಮತ್ತು ಆಚಾರ್ಯ ಶಂಕರರೊಂದಿಗೆ ನಿಲ್ಲುವ ಮೂರನೆಯ ಸಿದ್ಧಪುರುಷನೇ ಅಭಿನವಗುಪ್ತಪಾದರು.' ಹೀಗೆಂದು ಅಭಿನವಗುಪ್ತರನ್ನು ಆಳವಾಗಿ ಅಧ್ಯಯನ ಮಾಡಿದ್ದ ನಮ್ಮ ಕಾಲದ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರಾಗಿದ್ದ ಪ್ರೊ. ಸಾ. ಕೃ. ರಾಮಚಂದ್ರರಾಯರು ಉದ್ಗರಿಸಿದ್ದಾರೆ. ಅಷ್ಟೇ ಅಲ್ಲ, ಜಗತ್ತಿನ ಹತ್ತು ಮಂದಿ ಶ್ರೇಷ್ಠ ಚಿಂತಕರಲ್ಲಿ ಸೇರತಕ್ಕವರು ಅಭಿನವಗುಪ್ತರು ಎಂದು ಹೇಳಿದರೆ, ಇದೇನು ಅತ್ಯುಕ್ತಿಯಾಗದು.

ಮನುಷ್ಯ ತನ್ನ ನಿಜಸ್ವರೂಪವನ್ನು ಮರೆತಿದ್ದಾನೆ. ತಾನೇ ಶಿವ ಎಂಬ ಅರಿವು ಅವನಿಂದ ಮರೆಯಾಗಿದೆ. ಈ ಅರಿವನ್ನು ಮರಳಿ ದಕ್ಕಿಸಿಕೊಳ್ಳುವುದೇ 'ಪ್ರತ್ಯಭಿಜ್ಞಾ'. ಇದು ಅಭಿನವಗುಪ್ತರ ದಾರ್ಶನಿಕತೆಯ ಸರಳರೂಪದ ಸಾರಾಂಶ. ನಮ್ಮಲ್ಲೇ ಇರುವ ಶಿವನನ್ನು ಮತ್ತೆ ಕಂಡುಕೊಳ್ಳಲು ಕಲೆ, ತಂತ್ರ ಮತ್ತು ಜೀವನದ ಪ್ರತಿಯೊಂದು ಸಂಗತಿಯೂ ನೆರವಾಗಬಲ್ಲದು ಎಂದು ಪ್ರತಿಪಾದಿಸಿದವರು ಅವರು. ಹೀಗಾಗಿಯೇ, ಅವರ ಶಿಷ್ಯನೊಬ್ಬ ಉದ್ಗರಿಸಿದ್ದು – 'ಅಭಿನವಗುಪ್ತಪಾದರು ಬರೆದಿದ್ದೇ ದಿಟವಾದ ಬರವಣಿಗೆ. ಉಳಿದವರ ಬರಹಗಳು ನೀರಿನ ಮೇಲೆ ಬರೆದಂಥವು ಅಷ್ಟೆ.'

ಭಾರತೀಯ ಬೌದ್ಧಿಕ ವಾರಸಿಕೆಯು ಆಧುನಿಕ ಕಾಲದ ಹಲವು ಬಿರುಗಾಳಿಗಳಿಗೆ ಸಿಲುಕಿ ನಲುಗುತ್ತಿರುವ ಈ ಸಂದರ್ಭದಲ್ಲಿ ಅಭಿನವಗುಪ್ತರಂಥ ಪ್ರತಿಭಾಶಾಲಿಗಳ ಅನುಸಂಧಾನ ಅತ್ಯಂತ ಆವಶ್ಯಕವಾಗಿದೆ. ಇದು ಭಾರತೀಯ ಪ್ರಜ್ಞಾಪರಂಪರೆಯ ಬೇರುಗಳನ್ನು ಮತ್ತೆ ಗಟ್ಟಿಯಾಗಿ ನೆಲೆಗೊಳಿಸಬಲ್ಲದು. ಅಭಿನವಗುಪ್ತರ ಸಹಸ್ರಮಾನೋತ್ಸವ ಇಂಥದ್ದೊಂದು ಬೌದ್ಧಿಕ ಸಂಕಲ್ಪಕ್ಕೂ, ಕ್ರಿಯಾಶೀಲತೆಗೂ ಕಾರಣವಾಗಲಿ.

# ಹೀಗೊಂದು ವಿಶಿಷ್ಟ ಗೋ ಪ್ರಪಂಚ

ದಾರಿಯುದ್ದಕ್ಕೂ ಬೆಳ್ಳಗೆ ಅರಳಿ ಸುಗಂಧ ಸೂಸುತ್ತಿರುವ ಕಾಫಿ ತೋಟಗಳ ನಡುವಿನ ಅಂಕುಡೊಂಕಿನ ಹಾದಿಯಲ್ಲಿ, ಮೂಡಿಗೆರೆ ಹ್ಯಾಂಡ್ ಪೋಸ್ಟ್‌ನಿಂದ 10 ಕಿ.ಮೀ ದೂರದಲ್ಲಿರುವ ದಾರದಹಳ್ಳಿಗೆ ಸಾಗಿಬಂದ ನಮ್ಮನ್ನು ಗೋವಿನ ಕೊಂಬಿನ ಕಹಳೆಯನ್ನು ಊದುವುದರೊಂದಿಗೆ ಸ್ವಾಗತಿಸಿದ್ದು ಅಲ್ಲಿನ ಹಿರಿಯ ಪಶುಪರೀಕ್ಷಕ ಕೃಷ್ಣರಾಜು.

ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿಯಲ್ಲಿ ಇತರ ಊರುಗಳಿಗಿಂತ ಭಿನ್ನವಾದ ಸರ್ಕಾರಿ ಪಶುವೈದ್ಯ ಆಸ್ಪತ್ರೆಯಿದೆ. ಇದನ್ನು ಆಸ್ಪತ್ರೆ ಎನ್ನುವುದಕ್ಕಿಂತ ಗೋವಿನ ವಿಶ್ವರೂಪ ದರ್ಶನವೆನ್ನಬಹುದು. ಗೋವುಗಳು ಹಾಲು ನೀಡುವುದಕ್ಕೆ, ವಿವಿಧ ರೀತಿಯಲ್ಲಿ ಉಪಯೋಗಕ್ಕೆ ಬರುವ ಸಗಣಿ ನೀಡುವುದಕ್ಕಷ್ಟೇ ಸೀಮಿತ ಎಂದಷ್ಟೇ ತಿಳಿದಿರುವವರಿಗೆ ಒಂದು ಗೋವು ಏನೆಲ್ಲಾ ನೀಡಬಲ್ಲದು ಎಂಬುದರ ಸಂಪೂರ್ಣ ಮಾಹಿತಿ ಇಲ್ಲಿ ದೊರಕುತ್ತದೆ.

ಒಂದು ಸಾಮಾನ್ಯ ಸರ್ಕಾರಿ ಪಶು ಆಸ್ಪತ್ರೆಯನ್ನು ಜಾನುವಾರುಗಳ ಮಹತ್ವ ಸಾರುವ ಸಂಗ್ರಹಾಲಯವನ್ನು ಮಾಡಿರುವ ಪರಿ, ಪಶು ಪರೀಕ್ಷಕ ಕೃಷ್ಣರಾಜುರವರ ಗೋವಿನ ಮೇಲಿರುವ ಪೂಜನೀಯ ಭಾವ, ಸಾಮಾಜಿಕ ಕಳಕಳಿಯನ್ನು ಎತ್ತಿ ಹಿಡಿಯುತ್ತದೆ. ಆ ಪುಟ್ಟ ಆಸ್ಪತ್ರೆಯ ಕಿರಿದಾದ ಮೂರು ಕೊಠಡಿಗಳಲ್ಲಿ ಅಚ್ಚುಕಟ್ಟಾಗಿ ಜಾನುವಾರು ಮ್ಯೂಸಿಯಂ ಅನ್ನು ಕಲಾತ್ಮಕವಾಗಿ ರೂಪಿಸಿದ್ದಾರೆ. ಇಲ್ಲಿ ಜವಾನನೂ ಇವರೇ ದಿವಾನನೂ ಇವರೇ.

ದ್ವಾರವನ್ನು ದಾಟಿ ಆ ಪುಟ್ಟ ಆವರಣವನ್ನು ಪ್ರವೇಶಿಸುತ್ತಿದ್ದಂತೆಯೆ 'ಅಂಗೈಯಲ್ಲಿ ಔಷಧಿವನ' ನೋಡುಗರ ಗಮನ ಸೆಳೆಯುತ್ತದೆ. ಇಲ್ಲಿ 30ಕ್ಕೂ ಅಧಿಕ ಔಷಧಿಯ ಸಸ್ಯಗಳಿವೆ. ಒಳಗೆ ಅಡಿಯಿಟ್ಟೊಡನೆ ಆಕರ್ಷಿಸುವ ಮಜ್ಜಿಗೆಯಲ್ಲಿ ನಡೆವ ಗಡಿಯಾರ, ಸಗಣಿ, ಗೋಮೂತ್ರದಿಂದ ಮೂರು ತಿಂಗಳ ಕಾಲ ಉರಿವ ವಿದ್ಯುತ್ ದೀಪ, ಮೂಳೆ, ಕೊಂಬಿನ ಅಲಂಕಾರಿಕ ಸಾಮಗ್ರಿಗಳು, ಬೆರಗು ಮೂಡಿಸುತ್ತವೆ. ಹಾಗೆ ಬಲಕ್ಕೆ ತಿರುಗಿದರೆ ಜಾನಪದ ಕೃಷಿ ಪರಿಕರಗಳು, ಬಿದಿರಿನ ಗೊಟ್ಟಗಳು ಕಾಣಸಿಗುತ್ತವೆ. ಪುರಾತನ ಕಾಲದಲ್ಲಿ ಬೇಸಾಯ ಮಾಡುವಾಗ ಎತ್ತುಗಳಿಗೆ ಬಳಸುತ್ತಿದ್ದ ನೊಗ, ಹಗಲು ಪಟ್ಟಿ, ಬಾಯಿ ಕುಕ್ಕೆಗಳೂ ಇಲ್ಲಿ ಕಾಣಸಿಗುತ್ತವೆ. ಚರ್ಮದ ನಂತರ ತೆಗಿನ ಕೆತ್ತನೆ, ಗೋವಿನ ಕೊಂಬಿನ ಕಹಳೆ, ಕೊಂಬಿನ ದೀವಟಿಗೆ, ವಿವಿಧ ರಾಜ್ಯದಲ್ಲಿ ಬಳಕೆಯಲ್ಲಿದ್ದ ಹಲವು ಬಗೆಯ ಚಾಟಿಗಳು, ಗೋವಿನ ಚರ್ಮದ ಢಕ್ಕೆ, ಭೇರಿ, ನಗಾರಿ, ವಿಭಿನ್ನ ಶಬ್ದ ಹೊಮ್ಮಿಸುವ ತಮಟೆ, ಗಂಟೆಗಳು, ಹಲಗೆ, ಹಿಂದೆ ದೀಪದಂತೆ ಬಳಸುತ್ತಿದ್ದ ದನಗಳ ಒಸಡು, ನೂರಾರು ವರ್ಷಗಳ ಇತಿಹಾಸ ಹೇಳುವ ಮಜ್ಜಿಗೆ ಮೊಸರು ಬೆಣ್ಣೆಯ ಮಣ್ಣಿನ ಪಾತ್ರೆ, 200 ವರ್ಷಗಳ ಹಳೆಯ ತುಪ್ಪದ ಗಿಂಡಿ, ಜಾನುವಾರಿನಿಂದ ಸಿಗುವ ಉತ್ಪನ್ನಗಳಾದ ಹಾಲು, ಮೊಸರು, ಬೆಣ್ಣೆ, ಮಜ್ಜಿಗೆಯಿಂದ ಆಗುತ್ತಿದ್ದ ಔಷಧ ತಯಾರಿಕೆ, ಕೊಂಬಿನಿಂದ ಮಾಡಿದ ಸುತ್ತಿಗೆ, ಆಯುಧ ಇತ್ಯಾದಿ ಇಲ್ಲಿವೆ.

ಇದರ ಒಳಹೊಕ್ಕರೆ ಅಭಿರುಚಿ, ಆಸಕ್ತಿಯಿರುವವರಿಗೆ ದಿನಪೂರ್ತಿ ನೋಡಿದರೂ ಮುಗಿಯದ ಮಾಹಿತಿಯಿದೆ. ಕಳೆದ 25 ವರ್ಷಗಳಿಂದ



ಸ್ವಂತ ಖರ್ಚಿನಿಂದ ಗೋವು ಮತ್ತದರ ಪೂರಕ ವಸ್ತುಗಳ ಬಳಕೆ, ಪ್ರಾಚೀನ ಕೃಷಿ ಪರಿಕರಗಳ ಕುರಿತು ಕೃಷಿ ಮೇಳಗಳಲ್ಲಿ ವಸ್ತು ಪ್ರದರ್ಶನ ಏರ್ಪಡಿಸಿ ಮಾಹಿತಿ ನೀಡುತ್ತಿದ್ದಾರೆ ಕೃಷ್ಣರಾಜು.

ಕೃಪೆ: ಪ್ರಜಾವಾಣಿ

## ಚಂದ್ರಯಾನ-2 : ಸಂಪೂರ್ಣ ಸ್ವದೇಶಿ ನಿರ್ಮಿತ

ಮೊದಲ ಯತ್ನದಲ್ಲೇ ಮಂಗಳಯಾನ ಯೋಜನೆಯಲ್ಲಿ ಯಶಸ್ಸುಗಳಿಸಿದ ಇಸ್ರೊ (ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ) ತನ್ನ ಚಂದ್ರಯಾನ-2 ಯೋಜನೆಗೆ ರಷ್ಯಾದ ಸಹಭಾಗಿತ್ವ ಕೈಬಿಟ್ಟು ಅಮೆರಿಕದ ಅಲ್ಪ ನೆರವು ಪಡೆದು ಸಂಪೂರ್ಣ ಸ್ವದೇಶಿ ನಿರ್ಮಿತ ಯೋಜನೆಯನ್ನಾಗಿಸಲು ನಿರ್ಧರಿಸಿದೆ. ಚಂದ್ರಯಾನ-2 ಯೋಜನೆಗೆ ಸ್ವದೇಶಿ ನಿರ್ಮಿತ ಗಗನನೌಕೆ ಮತ್ತು ಸಾಧನವನ್ನು ಬಳಸಲಾಗುವುದು ಮತ್ತು 2017 ಡಿಸೆಂಬರ್ ಅಥವಾ 2018ರ ಮೊದಲ ಆರು ತಿಂಗಳ ಅವಧಿಯೊಳಗೆ ಈ ನೌಕೆಯನ್ನು ಉಡಾವಣೆ ಮಾಡಲಾಗುತ್ತದೆ. ಮಾಹಿತಿಗಳನ್ನು ಕಲೆಹಾಕಿ ಅವುಗಳನ್ನು ಭೂಮಿಗೆ ಕಳುಹಿಸುವ ಸಾಧನಗಳನ್ನುಈ ಗಗನನೌಕೆ ಹೊಂದಿರುತ್ತದೆ ಎಂದು ಇಸ್ರೋ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಹೇಳಿದ್ದಾರೆ. ಚಂದ್ರಯಾನ-1 ಯೋಜನೆಯಲ್ಲಿ ಭೂಮಿಯ ಏಕೈಕ ಉಪಗ್ರಹದಲ್ಲಿ ನೀರಿನ ಅಂಶಗಳು ಇದೇ ಎಂಬುದನ್ನು ಪತ್ತೆ ಮಾಡಲು ಇಸ್ರೊ ಯಶಸ್ವಿಯಾಗಿತ್ತು. ಚಂದ್ರಯಾನ-2 ಯೋಜನೆಗೆ ಗಗನನೌಕೆ ನಿರ್ಮಿಸಿಕೊಡಲು ರಷ್ಯಾದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಆರ್‌ಒಎಸ್‌ಸಿಒಎಸ್) 2010ರಲ್ಲಿ ಒಪ್ಪಿಕೊಂಡಿತ್ತು. ಈ ಯೋಜನೆಯಿಂದ ರಷ್ಯಾವನ್ನು ಕೈಬಿಟ್ಟಿರುವ ಇಸ್ರೊ ಯೋಜನೆಗೆ ಗಗನನೌಕೆಯನ್ನು ತಾನೇ ನಿರ್ಮಿಸಲು ಮುಂದಾಗಿದ್ದು ಚಂದ್ರಯಾನ-2 ಸಂಪೂರ್ಣ ಸ್ವದೇಶಿ ನಿರ್ಮಿತ ಯೋಜನೆ ಆಗಲಿದೆ.

# ಬಿಹಾರ : ಸಂಪೂರ್ಣ ಪಾನ ನಿಷೇಧ



ಸ್ವದೇಶದಲ್ಲಿ ಉತ್ಪಾದನೆಯಾಗುವ ವಿದೇಶಿ ಮದ್ಯ ಸಾರಾಯಿ ಸೇರಿದಂತೆ ಎಲ್ಲ ರೀತಿಯ ಮದ್ಯ ಮಾರಾಟವನ್ನು ಬಿಹಾರದಲ್ಲಿ ನಿಷೇಧಿಸಲಾಗಿದೆ. ಈ ಮೂಲಕ ಪಾನ ನಿಷೇಧಿಸಿರುವ ಗುಜರಾತ್, ಕೇರಳ, ನಾಗಾಲ್ಯಾಂಡ್ ಸಾಲಿಗೆ ಬಿಹಾರದ ಹೆಸರೂ ಸೇರ್ಪಡೆಯಾಗಿದೆ.

ಬಿಹಾರದ ಮುಖ್ಯಮಂತ್ರಿ ನಿತೀಶ್‌ಕುಮಾರ್ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ. ಏ. 1ರಿಂದ ದೇಶೀಯ ಮದ್ಯ ನಿಷೇಧಿಸಿದ್ದ ಸರ್ಕಾರ, ನಗರ ಪ್ರದೇಶಗಳಲ್ಲಿ ವಿದೇಶಿ ಮದ್ಯ ಸೇವನೆಗೆ ಅವಕಾಶ ನೀಡಿತ್ತು. ಈ ಬಗ್ಗೆ ಆಕ್ಷೇಪಗಳು ವ್ಯಕ್ತವಾದ ಹಿನ್ನೆಲೆಯಲ್ಲಿ ಹೋಟೆಲ್, ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲೂ ಮದ್ಯ ನಿಷೇಧಿಸಲಾಗಿದೆ. ಹೋಟೆಲ್, ರೆಸ್ಟೋರೆಂಟ್ ಹಾಗೂ ಕ್ಲಬ್‌ಗಳಲ್ಲಿ ಮದ್ಯ ಮಾರಾಟಕ್ಕೆ ನೀಡಲಾಗಿದ್ದ ಪರವಾನಗಿ ರದ್ದುಗೊಳಿಸಿದ್ದು, ಹೊಸತಾಗಿ ಲೈಸೆನ್ಸ್‌ನ್ನು ನೀಡುವುದಿಲ್ಲ ಎಂದು ತಿಳಿಸಿದೆ.

ರಾಜ್ಯಾದ್ಯಂತ ಮದ್ಯ ನಿಷೇಧಿಸಿದ್ದರೂ, ನೀರಾ ಸೇವನೆಗೆ (ತಾಳೆಗರಿ ಮರದಿಂದ ಸೂರ್ಯೋದಯಕ್ಕೂ ಮುನ್ನ ತೆಗೆಯುವುದು) ಸರ್ಕಾರ ಅನುಮತಿ ನೀಡಿದೆ. ಆದರೆ, ತಾಡಿ ಸೇವನೆಯನ್ನು (ಸೂರ್ಯೋದಯದ ಬಳಿಕ ತಾಳೆಗರಿಯಿಂದ ತೆಗೆದರೆ ಅಮಲು ಪದಾರ್ಥವಾಗಿರುತ್ತದೆ) ನಿಷೇಧಿಸಿದೆ. ಮದ್ಯ ತಯಾರಿಸುವ ಕಂಪನಿಗಳು ಈಗಾಗಲೇ ರಾಜ್ಯದಲ್ಲಿದ್ದರೆ ಅವುಗಳ ಉತ್ಪಾದನೆ ಮೇಲೆ ನಿಷೇಧ ಹೇರುವುದಿಲ್ಲ, ಆದರೆ ಮಾರಾಟಕ್ಕೆ ನಿರ್ಬಂಧ ಹೇರಲಾಗಿದೆ. ಹೊರರಾಜ್ಯಗಳಿಗೆ ಮದ್ಯ ಸಾಗಿಸುವ ವೇಳೆ ವಾಹನಗಳು ಜಿಪಿಎಸ್ ಹೊಂದಿರುವುದನ್ನು ಕಡ್ಡಾಯಗೊಳಿಸಲಾಗಿದೆ.

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.
ಚಂದಾ/ನವೀಕರಣ/ವಿಳಾಸ ಬದಲಾವಣೆಗಾಗಿ ಸಂಪರ್ಕಿಸಿ : #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-04. ಮೊಬೈಲ್: 97391 83021 ಸಂಪಾದಕೀಯ : 97312 64009